# ಕರ್ನಾಟಕ ಲೋಕ ಸೇವಾ ಆಯೋಗ (ಸೇವಾ ಷರತ್ತುಗಳು) ವಿನಿಯಮಗಳು, 1957

(ಕರ್ನಾಟಕ ರಾಜ್ಯಪತ್ರ, ಗುರುವಾರ, ಜೂನ್ 17, 2010, ಭಾಗ – IVಎ, 523 ರಿಂದ 551ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ವಿಷಯಾನುಕ್ರಮಣಿಕೆ

ಭಾಗ–I ಪ್ರಾರಂಭಿಕ

ಭಾಗ–II ರಚನೆ ಮತ್ತು ವೇತನ

ಭಾಗ–III ರಜೆ

ಭಾಗ–IV ಪ್ರಯಾಣ ಭತ್ಯೆ

ಭಾಗ–V ವೈದ್ಯಕೀಯ ಚಿಕಿತ್ಸೆ

ಭಾಗ–VI ನಿವೃತ್ತಿ ವೇತನ

ಭಾಗ–VII ಸಿಬ್ಬಂದಿ

ಭಾಗ–VIII ಸಂಕೀರ್ಣ

ಅನುಬಂಧಗಳು

## ಕರ್ನಾಟಕ ಲೋಕ ಸೇವಾ ಆಯೋಗ (ಸೇವಾ ಷರತ್ತುಗಳು) ವಿನಿಯಮಗಳು, 1957

**ಅಧಿಸೂಚನೆ ಸಂಖ್ಯೆ ಜಿಎಡಿ (ಓಎಂ) 4 ಪಿಎಸ್‌ಸಿ 57,**

**ದಿನಾಂಕ 12ನೇ ಡಿಸೆಂಬರ್ 1957**

ಭಾರತ ಸಂವಿಧಾನದ 318ನೇ ಅನುಚ್ಛೇದದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮತ್ತು ಸದರಿ ವಿಷಯಕ್ಕೆ ಸಂಬಂಧಿಸಿದ ಹಿಂದಿನ ಎಲ್ಲ ವಿನಿಯಮಗಳನ್ನು ರದ್ದುಗೊಳಿಸಿ, ಕರ್ನಾಟಕ ರಾಜ್ಯಪಾಲರು ಈ ಮೂಲಕ ಈ ಮುಂದಿನ ವಿನಿಯಮಗಳನ್ನು ರಚಿಸುತ್ತಾರೆ, ಎಂದರೆ:–

### ಭಾಗ – I ಪ್ರಾರಂಭಿಕ

1. ಈ ವಿನಿಯಮಗಳನ್ನು ಕರ್ನಾಟಕ ಲೋಕ ಸೇವಾ ಆಯೋಗ (ಸೇವಾ ಷರತ್ತುಗಳು) ವಿನಿಯಮಗಳು, 1957 ಎಂದು ಕರೆಯತಕ್ಕದ್ದು.

2. ಈ ವಿನಿಯಮಗಳಲ್ಲಿ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಎ) "ಆಯೋಗ" ಎಂದರೆ ಕರ್ನಾಟಕ ಲೋಕ ಸೇವಾ ಆಯೋಗ ಎಂದು ಅರ್ಥ;

(ಬಿ) "ಸಂವಿಧಾನ" ಎಂದರೆ ಭಾರತದ ಸಂವಿಧಾನ ಎಂದು ಅರ್ಥ;

(ಸಿ) "ಸದಸ್ಯ" ಎಂದರೆ ಆಯೋಗದ ಸದಸ್ಯ ಎಂದು ಅರ್ಥ ಮತ್ತು ಅದು ಅದರ ಅಧ್ಯಕ್ಷರನ್ನೂ ಒಳಗೊಳ್ಳುತ್ತದೆ.

### ಭಾಗ – II ರಚನೆ ಮತ್ತು ವೇತನ

[+]3. ಆಯೋಗವು, ಒಬ್ಬರು ಅಧ್ಯಕ್ಷರನ್ನು ಮತ್ತು ಇತರ ಏಳು ಸದಸ್ಯರನ್ನು ಒಳಗೊಂಡಿರತಕ್ಕದ್ದು.

[*]4(1)(i) ದಿನಾಂಕ 2009ರ ಜುಲೈ 31ರಿಂದ ಜಾರಿಗೆ ಬರುವಂತೆ ಅಧ್ಯಕ್ಷರು [@]ಎಂಬತ್ತು ಸಾವಿರ ರೂಪಾಯಿಗಳ ವೇತನವನ್ನು ಪಡೆಯತಕ್ಕದ್ದು ಮತ್ತು ಇತರ ಪ್ರತಿಯೊಬ್ಬ ಸದಸ್ಯರು [@]ಎಪ್ಪತ್ತು ಸಾವಿರ ರೂಪಾಯಿಗಳ ವೇತನವನ್ನು ಪಡೆಯತಕ್ಕದ್ದು:

---

\+ ಅಧಿಸೂಚನೆ ಸಂ. ಡಿಪಿಎಆರ್ 47 ಎಸ್‌ಎಸ್‌ಸಿ 2006, ದಿನಾಂಕ 27–7–2006ರ ಮೂಲಕ ಪ್ರತಿಯೋಜಿಸಲಾಗಿದೆ (ರಾಜ್ಯಪತ್ರ ದಿನಾಂಕ 27–7–2006)

* ಅಧಿಸೂಚನೆ ಸಂ. ಡಿಪಿಎಆರ್ 42 ಎಸ್‌ಎಸ್‌ಸಿ 95, ದಿನಾಂಕ 11–7–19996 ನ್ನು ನೋಡಿ.

@ ಅಧಿಸೂಚನೆ ಸಂ. ಡಿಪಿಎಆರ್ 5 ಎಸ್‌ಎಸ್‌ಸಿ 2009, ದಿನಾಂಕ 31–7–2009ರ ಮೂಲಕ ಪ್ರತಿಯೋಜಿಸಲಾಗಿದೆ (ರಾಜ್ಯಪತ್ರ ದಿನಾಂಕ 31–7–2009).

ಪರಂತು, ಒಬ್ಬ ವ್ಯಕ್ತಿಯು ಆಯೋಗಕ್ಕೆ ತಾನು ನೇಮಕಗೊಂಡ ಕಾಲದಲ್ಲಿ ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಒಂದು ಹುದ್ದೆಯನ್ನು ಧಾರಣ ಮಾಡಿದ್ದರೆ, ಆ ವ್ಯಕ್ತಿಯು ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ನೇಮಕಗೊಂಡ ನಂತರ, ಅಂಥ ನೇಮಕದ ಕಾಲದಲ್ಲಿ ಅವರು ಧಾರಣಮಾಡಿದ್ದ ಹುದ್ದೆಯ ವೇತನ ಶ್ರೇಣಿಯಲ್ಲಿ ಸಂಬಂಧಪಟ್ಟ ನಿಯಮಗಳಡಿಯಲ್ಲಿ ಅವರು ಕಾಲಕಾಲಕ್ಕೆ ಪಡೆಯಬಹುದಾಗಿದ್ದ ವೈಯಕ್ತಿಕ ವೇತನವನ್ನೂ ಒಳಗೊಂಡಂತೆ ವೇತನವನ್ನು ಅಥವಾ (1)ನೇ ಖಂಡದಲ್ಲಿ ಉಲ್ಲೇಖಿಸಿದ ವೇತನವನ್ನು – ಇವುಗಳಲ್ಲಿ ಯಾವುದು ಹೆಚ್ಚೋ ಆ ವೇತನವನ್ನು ಪಡೆಯತಕ್ಕದ್ದು:

ಮತ್ತೂ ಪರಂತು, ಸರ್ಕಾರದ, ಸ್ಥಳೀಯ ಸಂಸ್ಥೆಯ, ವಿಶ್ವವಿದ್ಯಾನಿಲಯದ ಅಥವಾ ಪೂರ್ಣವಾಗಿ ಅಥವಾ ಗಣನೀಯವಾಗಿ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಇತರ ನಿಕಾಯದ ಅಧೀನದ ಸೇವೆಯಿಂದ ನಿವೃತ್ತನಾದ ಮತ್ತು ನಿವೃತ್ತಿ ವೇತನ, ಉಪದಾನ, ವಂತಿಗೆ ಭವಿಷ್ಯ ನಿಧಿ ರೂಪದಲ್ಲಿ ಅಥವಾ ಬೇರೆ ರೀತಿಯ ಯಾವುದೇ ನಿವೃತ್ತಿ ಪ್ರಯೋಜನಗಳನ್ನು ಪಡೆಯುತ್ತಿರುವ ಅಥವಾ ಪಡೆದಿರುವ ಅಥವಾ ಪಡೆಯಲು ಹಕ್ಕುಳ್ಳ ವ್ಯಕ್ತಿಯು, ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ನೇಮಕಗೊಂಡ ಸಂದರ್ಭದಲ್ಲಿ, (i)ನೇ ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ವೇತನವನ್ನು ನಿವೃತ್ತಿ ವೇತನದ (ಪರಿವರ್ತನೆಗೊಳಿಸಿರಬಹುದಾದಂಥ ನಿವೃತ್ತಿ ವೇತನದ ಯಾವುದೇ ಭಾಗವೂ ಒಳಗೊಂಡಂತೆ) ಮತ್ತು ನಿವೃತ್ತಿ ವೇತನಕ್ಕೆ ಸಮಾನವಾದ ಅಥವಾ ಇತರ ರೂಪಗಳಲ್ಲಿರುವ ನಿವೃತ್ತಿ ಪ್ರಯೋಜನಗಳು ಯಾವುವಾದರೂ ಇದ್ದರೆ, ಅವುಗಳ ಒಟ್ಟು ಮೊತ್ತದಷ್ಟು ಕಡಿಮೆ ಮಾಡತಕ್ಕದ್ದು:

ಮತ್ತೂ ಪರಂತು, ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಹುದ್ದೆಯನ್ನು ಧಾರಣ ಮಾಡಿದ್ದ ವ್ಯಕ್ತಿಯು ಆಯೋಗಕ್ಕೆ ಅವರು ನೇಮಕಗೊಂಡ ಕಾಲದಲ್ಲಿ ಪಡೆಯುತ್ತಿದ್ದ ತುಟ್ಟಿಭತ್ಯೆಯು, ಮನೆ ಬಾಡಿಗೆ ಭತ್ಯೆಯು ಮತ್ತು ನಗರ ಪರಿಹಾರ ಭತ್ಯೆಯು, ಅಧ್ಯಕ್ಷರಾಗಿ ಅಥವಾ ಇತರ ಸದಸ್ಯರಾಗಿ ಹಾಗೆ ನೇಮಕಗೊಂಡ ನಂತರ, ಅಂಥ ನೇಮಕದ ಕಾಲದಲ್ಲಿ ಅವರು ಧಾರಣ ಮಾಡಿದ್ದ / ಹುದ್ದೆಯ ಕೇಂದ್ರ ಕಾರ್ಯಸ್ಥಾನ ಯಾವುದಾಗಿತ್ತೋ ಆ ಸ್ಥಳದಲ್ಲಿ ಅವರು, ಕಾಲಕಾಲಕ್ಕೆ ಪಡೆಯಬಹುದಾಗಿದ್ದ ತುಟ್ಟಿಭತ್ಯೆಗಿಂತ, ಮನೆ ಬಾಡಿಗೆ ಭತ್ಯೆಗಿಂತ ಮತ್ತು ನಗರ ಪರಿಹಾರ ಭತ್ಯೆಗಿಂತ ಕಡಿಮೆ ಇರತಕ್ಕದ್ದಲ್ಲ.

(ii) ಅಧ್ಯಕ್ಷರು ಮತ್ತು ಇತರ ಸದಸ್ಯರು ಕಾಲಕಾಲಕ್ಕೆ ರಾಜ್ಯ ಸರ್ಕಾರದ ಅತ್ಯುನ್ನತ ನೌಕರ ವರ್ಗಕ್ಕೆ ಅನ್ವಯವಾಗಬಹುದಾದ ದರಗಳಲ್ಲಿ ತುಟ್ಟಿಭತ್ಯೆಯನ್ನು ಮತ್ತು ನಗರ ಪರಿಹಾರ ಭತ್ಯೆಯನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು;

(iii) ಅಧ್ಯಕ್ಷರು ಮತ್ತು ಇತರ ಸದಸ್ಯರು ಮೂಲ ವೇತನದ ಶೇಕಡಾ *30ರಷ್ಟು ಮನೆ ಬಾಡಿಗೆ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು;

(iv) ಅಧ್ಯಕ್ಷರು ಅಥವಾ ಸದಸ್ಯರು, ಆಯೋಗದ ಕೇಂದ್ರ ಕಾರ್ಯಸ್ಥಾನದಲ್ಲಿ ಸ್ವಂತ ಮನೆ ಹೊಂದಿರದಿದ್ದಲ್ಲಿ ಮತ್ತು ಅವರು ಸುಸಜ್ಜಿತವಲ್ಲದ ನಿವಾಸವನ್ನು ಒದಗಿಸಬೇಕೆಂದು ಇಚ್ಛಿಸಿದರೆ, ನಿವಾಸವಾಗಿ ಬಳಕೆಯಾಗುತ್ತಿದ್ದ ಸರ್ಕಾರಿ ಕಟ್ಟಡಕ್ಕೆ ಅನ್ವಯವಾಗಬಹುದಾದ ನಿಯಮಗಳಿಗನುಸಾರವಾಗಿ ಬಾಡಿಗೆಯ ಸಂದಾಯ ಮತ್ತು ಇತರ ಷರತ್ತುಗಳಿಗೆ ಒಳಪಟ್ಟು ಸುಸಜ್ಜಿತವಲ್ಲದ ನಿವಾಸವನ್ನು ಅವರಿಗೆ ಒದಗಿಸಬಹುದು;

(2) ಆಯೋಗಕ್ಕೆ ನೇಮಕಗೊಂಡ ದಿನಾಂಕದಂದು ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿದ್ದ ಸದಸ್ಯರು, ಅವರು ಆಯೋಗದ ಸದಸ್ಯರಾಗಿ ನೇಮಕಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಅಂಥ ಸೇವೆಯಿಂದ ನಿವೃತ್ತರಾಗಿರುವುದಾಗಿ ಭಾವಿಸತಕ್ಕದ್ದು.

---

* ಅಧಿಸೂಚನೆ ಸಂ ಡಿಪಿಎಆರ್ 71 ಎಸ್‌ಎಸ್‌ಸಿ 2007, ದಿನಾಂಕ 4–6–2008ರ ಮೂಲಕ ಪ್ರತಿಯೋಜಿಸಲಾಗಿದೆ.

*5. ಅಧ್ಯಕ್ಷರು ಕರ್ತವ್ಯಕ್ಕೆ ಗೈರುಹಾಜರಾಗಿದ್ದು ಅಂಥ ಅವಧಿಯು ಒಂದು ತಿಂಗಳನ್ನು ಮೀರುವ ಸಂದರ್ಭಗಳಲ್ಲಿ, ಅವರ ಹುದ್ದೆಯು ಪ್ರಸಕ್ತ ಕರ್ತವ್ಯಗಳನ್ನು ನಿರ್ವಹಿಸಲು ಒಬ್ಬ ಸದಸ್ಯರನ್ನು ಅಗತ್ಯಪಡಿಸಿದಾಗ ಅವರಿಗೆ ತಿಂಗಳೊಂದಕ್ಕೆ 500/– ರೂಪಾಯಿಗಳಂತೆ ಪ್ರಭಾರ ಭತ್ಯೆಯನ್ನು ಪಡೆಯಲು ಅನುಮತಿಸತಕ್ಕದ್ದು.

## ಭಾಗ III – ರಜೆ

**6 (1) ವಿನಿಯಮ 4(2)ರಲ್ಲಿ ಏನೇ ಒಳಗೊಂಡಿದ್ದರೂ, ಆಯೋಗಕ್ಕೆ ನೇಮಕಗೊಂಡ ಕಾಲದಲ್ಲಿ ಕೇಂದ್ರದ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿದ್ದಂಥ ಸದಸ್ಯರಿಗೆ, ಅವರ ನೇಮಕದ ನಿಕಟಪೂರ್ವದಲ್ಲಿ ಅವರಿಗೆ ಅನ್ವಯವಾಗುತ್ತಿದ್ದ ನಿಯಮಗಳ ಮೇರೆಗೆ ರಾಜ್ಯಪಾಲರು ರಜೆಯನ್ನು ಮಂಜೂರು ಮಾಡಬಹುದು ಮತ್ತು ಸದಸ್ಯರಾಗಿ ಅವರ ಸೇವೆಯನ್ನು ಅಂಥ ರಜೆಗಾಗಿ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಹಾಗೂ ಅಂಥ ಯಾರೇ ಸದಸ್ಯರ ರಜೆಯ ಲೆಕ್ಕದಲ್ಲಿ ಜಮೆ ಇರುವ ರಜೆಯು ಅವರು ಸದಸ್ಯರಾಗಿ ನೇಮಕಗೊಂಡ ದಿನಾಂಕದಂದು ರದ್ದಾಗತಕ್ಕದ್ದಲ್ಲ. ಆದರೆ, ಅದನ್ನು ಮುಂದಕ್ಕೆ ಒಯ್ಯತಕ್ಕದ್ದು ಮತ್ತು ಅವರು ಸದಸ್ಯರಾಗಿರುವ ಅವಧಿಯಲ್ಲಿ ಅದನ್ನು ಬಳಸಿಕೊಳ್ಳಬಹುದು. ಸದಸ್ಯರು ಆಯೋಗಕ್ಕೆ ಅವರು ನೇಮಕಗೊಂಡ ದಿನಾಂಕದಂದು ವಯೋನಿವೃತ್ತಿಯ ಮೇಲೆ ಅವರು ನಿವೃತ್ತರಾಗಿದ್ದಿದ್ದರೆ, ಅವರಿಗೆ ಅನ್ವಯಿಸುತ್ತಿದ್ದ ನಿಯಮಗಳ ಮೇರೆಗೆ ಅನುಮತಿಸಬಹುದಾದಷ್ಟರಮಟ್ಟಿಗೆ, ಹಾಗೆ ಮುಂದಕ್ಕೆ ಒಯ್ಯಲಾದ ರಜೆಯ ಪೈಕಿ ಅವರ ಲೆಕ್ಕದಲ್ಲಿರುವ ಗಳಿಕೆ ರಜೆಗೆ ಸಂಬಂಧಿಸಿದಂತೆ ರಜೆ ಸಂಬಳಕ್ಕೆ ಸಮಾನವಾದ ನಗದನ್ನು ಅವರಿಗೆ ಸಂದಾಯ ಮಾಡಬಹುದು.

(2) ಆಯೋಗಕ್ಕೆ ನೇಮಕಗೊಂಡ ಕಾಲದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿರದ ಸದಸ್ಯರಿಗೆ, ರಾಜ್ಯಪಾಲರು ಈ ಮುಂದಿನಂತೆ ರಜೆಯನ್ನು ಮಂಜೂರು ಮಾಡಬಹುದು:–

(ಎ) ಕರ್ತವ್ಯದ ಮೇಲೆ ಕಳೆದ ಅವಧಿಯಲ್ಲಿ ಹನ್ನೊಂದಕ್ಕೆ ಒಂದರ ದರದಲ್ಲಿ ಪೂರ್ಣ ವೇತನಕ್ಕೆ ಸಮನಾದ ರಜಾ ಸಂಬಳದ ಮೇಲೆ ಗಳಿಕೆ ರಜೆ;

(ಬಿ) ಸೇವೆಯ ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕೆ ಇಪ್ಪತ್ತು ದಿನಗಳಂತೆ ವೈದ್ಯಕೀಯ ಪ್ರಮಾಣಪತ್ರದ ಮೇಲೆ ಅಥವಾ ಖಾಸಗಿ ವ್ಯವಹಾರಗಳಿಗಾಗಿ ಅರ್ಧ ವೇತನಕ್ಕೆ ಸಮನಾದ ರಜೆ;

(ಸಿ) ಬೇರೆ ಯಾವುದೇ ರಜೆಯು ಅನುಮತೀಯವಲ್ಲದಿರುವಾಗ ಅಥವಾ ಇತರ ರಜೆಯು ಅನುಮತೀಯವಾಗಿದ್ದು ಸಂಬಂಧಪಟ್ಟ ಸದಸ್ಯನು ಅಸಾಧಾರಣ ರಜೆಯ ಮಂಜೂರಾತಿಗಾಗಿ ಲಿಖಿತದಲ್ಲಿ ಅರ್ಜಿ ಸಲ್ಲಿಸಿದಾಗ, ಭತ್ಯೆರಹಿತ ಅಸಾಧಾರಣ ರಜೆ.

(3) ಸದಸ್ಯರು, ಅರ್ಧ ವೇತನದ ಮೊಬಲಗಿಗೆ ಮೀರದಂತೆ ಪೂರ್ಣ ವೇತನದ ಮೇಲೆ ಪರಿವರ್ತಿತ ರಜೆಗೆ ಹಕ್ಕುಳ್ಳವರಾಗಿರತಕ್ಕದ್ದು. ವೈದ್ಯಕೀಯ ಪ್ರಮಾಣಪತ್ರದ ಮೇಲೆ ಅಥವಾ ಖಾಸಗಿ ವ್ಯವಹಾರಗಳಿಗಾಗಿ ರಜೆಯನ್ನು ತೆಗೆದುಕೊಂಡಿರುವಲ್ಲಿ ಮತ್ತು ರಜೆಯನ್ನು ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿಯು, ಸದಸ್ಯರು ರಜೆಯ ಮುಕ್ತಾಯದ ಬಳಿಕ ಕರ್ತವ್ಯಕ್ಕೆ ಹಿಂತಿರುಗುವರೆಂದು ನಂಬಲು ಕಾರಣ ಇದ್ದರೆ, ಇರುವ ರಜೆಯನ್ನು ಮಂಜೂರು ಮಾಡಬಹುದು.

---

* ಅಧಿಸೂಚನೆ ಸಂ ಡಿಪಿಎಆರ್ 89 ಎಸ್‌ಎಸ್‌ಸಿ 87, ದಿನಾಂಕ 13–11–87, 1–01–87ರಿಂದ ಜಾರಿಯಾಗಿದೆ (ರಾಜ್ಯಪತ್ರ ದಿನಾಂಕ 21–1–88)

** ಅಧಿಸೂಚನೆ ಸಂ ಡಿಪಿಎಆರ್ 50 ಎಸ್‌ಎಸ್‌ಸಿ 85, ದಿನಾಂಕ 19–5–86

(4) ಸದಸ್ಯರು, ಉಪಯೋಗಿಸಿಕೊಂಡಿರದ ಗಳಿಕೆ ರಜೆಗೆ ಬದಲಾಗಿ ಈ ಮುಂದಿನಂತೆ ನಗದು ಹಣ ಸಂದಾಯಕ್ಕೆ ಹಕ್ಕುಳ್ಳವರಾಗಿರತಕ್ಕದ್ದು:–

(ಎ) ಅವರು, ಪದಧಾರಣ ಮಾಡಿರುವುದು ನಿಂತುಹೋಗಿರುವ ಕಾಲದಲ್ಲಿ ಅವರ ಲೆಕ್ಕದಲ್ಲಿದ್ದ ಗಳಿಕೆ ರಜೆಯ ಅವಧಿಗೆ, ಅವರಿಗೆ ರಜಾ ವೇತನಕ್ಕೆ ಸಮನಾದ ನಗದನ್ನು ಸಂದಾಯ ಮಾಡತಕ್ಕದ್ದು;

(ಬಿ) (ಎ) ಖಂಡದ ಮೇರೆಗೆ ರಜಾ ಸಂಬಳಕ್ಕೆ ಸಮನಾದ ನಗದು ಸಂದಾಯವು ಗರಿಷ್ಠ 180* ದಿನಗಳ ಗಳಿಕೆ ರಜೆಗೆ ಸೀಮಿತವಾಗಿರತಕ್ಕದ್ದು;

(ಸಿ) ಹಾಗೆ ಅನುಮತಿಸಬಹುದಾದ ರಜಾ ಸಂಬಳಕ್ಕೆ ಸಮನಾದ ನಗದನ್ನು ಪದಧಾರಣ ಮಾಡಿರುವುದು ನಿಂತುಹೋದ ಕಾಲದಲ್ಲಿ ಸದಸ್ಯರಿಗೆ ಸಂದಾಯ ಮಾಡತಕ್ಕದ್ದು ಮತ್ತು ಅದನ್ನು ಒಂದೇ ಬಾರಿಗೆ ಇಡೀ ಗಂಟಿನಲ್ಲಿ ಸಂದಾಯ ಮಾಡತಕ್ಕದ್ದು.

** (5) ರಜೆಗೆ ಅರ್ಜಿ ಸಲ್ಲಿಸುವ ಕಾಲದಲ್ಲಿ ತನ್ನ ಲೆಕ್ಕದಲ್ಲಿ ಯಾವುದೇ ರಜೆ ಇರದ ಸದಸ್ಯರಿಗೆ "ಗಳಿಸಿರದ ರಜೆ"ಯನ್ನು ಈ ಮುಂದಿನ ಷರತ್ತುಗಳಿಗೆ ಒಳಪಟ್ಟು ಮಂಜೂರ್ಮಾಡಬಹುದು, ಎಂದರೆ:–

(ಎ) ಸದಸ್ಯರು ಸದರಿ ರಜೆಯ ಮುಕ್ತಾಯದ ಬಳಿಕ ಕರ್ತವ್ಯಕ್ಕೆ ಹಿಂತಿರುಗುವ ಸಮಂಜಸ ಸಂಭವವಿದೆಯೆಂದು ರಜೆ ಮಂಜೂರು ಮಾಡುವ ಸಕ್ಷಮ ಪ್ರಾಧಿಕಾರಿಗೆ ಮನವರಿಕೆಯಾಗಿರಬೇಕು;

(ಬಿ) ಗಳಿಸಿರದ ರಜೆಯು ಆತನು ತದನಂತರ ಗಳಿಸುವ ಸಂಭವವಿರುವ ಅರ್ಧ ವೇತನ ರಜೆಗೆ ಸೀಮಿತವಾಗಿರತಕ್ಕದ್ದು;

(ಸಿ) ಪದಾವಧಿಯ ಇಡೀ ಅವಧಿಯಲ್ಲಿ ಗಳಿಸಿರದ ರಜೆಯು, ಗರಿಷ್ಠ 120 ದಿನಗಳಿಗೆ ಸೀಮಿತವಾಗಿರತಕ್ಕದ್ದು, ಅದರ ಪೈಕಿ, ಒಂದು ಸಲಕ್ಕೆ 30 ದಿನಗಳಿಗೆ ಮತ್ತು ವೈದ್ಯಕೀಯ ಪ್ರಮಾಣಪತ್ರದ ಮೇಲೆ ಹೊರತು, ಒಟ್ಟಾರೆ 60 ದಿನಗಳಿಗೆ ಮೀರತಕ್ಕದ್ದಲ್ಲ;

(ಡಿ) ಗಳಿಸಿರದ ರಜೆಯನ್ನು, ಸದಸ್ಯರು ಆ ತರುವಾಯ ಗಳಿಸಬಹುದಾದ ಅರ್ಧ ವೇತನ ರಜೆಯಲ್ಲಿ ಕಳೆಯತಕ್ಕದ್ದು;

(ಇ) ಗಳಿಸಿರದ ರಜೆಯ ಮೇಲಿರುವ ಸದಸ್ಯರು, ಅಂಥ ರಜೆಯ ಮೇಲೆ ತೆರಳುವುದಕ್ಕೆ ನಿಕಟ ಪೂರ್ವದಲ್ಲಿ ಪಡೆಯುತ್ತಿದ್ದ ವೇತನದ ಅರ್ಧ ಮೊತ್ತಕ್ಕೆ ಸಮನಾದ ರಜಾ ಸಂಬಳಕ್ಕೆ ಹಕ್ಕುಳ್ಳವರಾಗಿರತಕ್ಕದ್ದು;

---

* ಅಧಿಸೂಚನೆ ಸಂ ಡಿಪಿಎಆರ್ 89 ಎಸ್ಎಸ್‌ಸಿ 87, ದಿನಾಂಕ 13–11–87 (ರಾಜ್ಯಪತ್ರ ದಿನಾಂಕ 21–1–88)

** ಅಧಿಸೂಚನೆ ಸಂ ಡಿಪಿಎಆರ್ 25 ಎಸ್ಎಸ್‌ಸಿ 90, ದಿನಾಂಕ 05–02–1992

(ಎಫ್) ಗಳಿಸಿರದ ರಜೆಯನ್ನು ಯಾವ ಸದಸ್ಯರಿಗೆ ಮಂಜೂರು ಮಾಡಲಾಗಿದೆಯೋ ಆ ಸದಸ್ಯರು ಅಂಥ ಸದಸ್ಯರಾಗಿ ಕರ್ತವ್ಯಕ್ಕೆ ಹಿಂತಿರುಗದೆ ರಾಜೀನಾಮೆ ನೀಡಿದಲ್ಲಿ ಅಥವಾ ನಿವೃತ್ತರಾದಲ್ಲಿ ಅಥವಾ ಅವರನ್ನು ಪದದಿಂದ ತೆಗೆದುಹಾಕಿದಲ್ಲಿ ಗಳಿಸಿರದ ರಜೆಯನ್ನು ರದ್ದುಪಡಿಸತಕ್ಕದ್ದು. ಈ ರಾಜೀನಾಮೆಯು, ನಿವೃತ್ತಿಯು ಅಥವಾ ತೆಗೆದುಹಾಕುವಿಕೆಯು ಯಾವ ದಿನಾಂಕದಿಂದ ಅಂಥ ರಜೆಯು ಪ್ರಾರಂಭವಾಯಿತೋ ಆ ದಿನಾಂಕದಿಂದ ಜಾರಿಗೆ ಬರತಕ್ಕದ್ದು ಮತ್ತು ಈಗಾಗಲೇ ಸಂದಾಯ ಮಾಡಲಾದ ರಜಾ ಸಂಬಳವನ್ನು ವಸೂಲುಮಾಡತಕ್ಕದ್ದು; ಮತ್ತು

(ಜಿ) ಗಳಿಸಿರದ ರಜೆಯನ್ನು ಬಳಸಿಕೊಂಡು, ಕರ್ತವ್ಯಕ್ಕೆ ಹಿಂತಿರುಗುವ ಸದಸ್ಯರು ಅಂಥ ರಜೆಯನ್ನು ಅವರು ಗಳಿಸುವುದಕ್ಕೆ ಮುಂಚೆ, ಅಂಥ ಸದಸ್ಯರಾಗಿ ರಾಜೀನಾಮೆ ನೀಡಿದರೆ ಅಥವಾ ನಿವೃತ್ತರಾದರೆ ಅಥವಾ ಅವರನ್ನು ತೆಗೆದು ಹಾಕಿದ್ದರೆ ಅವರು ಮುಂದೆ ಗಳಿಸದಿರುವ ರಜೆಯಷ್ಟರ ಮಟ್ಟಿಗೆ ರಜಾ ಸಂಬಳವನ್ನು ಮರುಪಾವತಿ ಮಾಡಲು ಬದ್ಧರಾಗಿರತಕ್ಕದ್ದು:

ಪರಂತು, ಇನ್ನು ಮುಂದೆಯೂ ಸೇವೆ ಸಲ್ಲಿಸಲು ಸದಸ್ಯರನ್ನು ಅಸಮರ್ಥರನ್ನಾಗಿಸುವ ಅನಾರೋಗ್ಯದ ಕಾರಣದಿಂದ ನಿವೃತ್ತಿ ಆಗಿದ್ದರೆ ಅಥವಾ ಅವರು ಮರಣ ಹೊಂದಿದ ಪಕ್ಷದಲ್ಲಿ, ಮೇಲೆ ಹೇಳಿದ ಖಂಡಗಳ ಮೇರೆಗೆ ಯಾವುದೇ ರಜಾ ಸಂಬಳವನ್ನು ವಸೂಲು ಮಾಡತಕ್ಕದ್ದಲ್ಲ.

## ಭಾಗ IV – ಪ್ರಯಾಣ ಭತ್ಯೆ

7. **ಪ್ರಯಾಣ ಮತ್ತು ಇತರ ಭತ್ಯೆ:–** (1) ಸದಸ್ಯರು, ತಮ್ಮ ಪದಕ್ಕೆ ಸಂಬಂಧಿಸಿದ ಕರ್ತವ್ಯದ ಮೇಲೆ ಪ್ರವಾಸದಲ್ಲಿರುವಾಗ, ಕೆಳಗೆ ನಿರ್ದಿಷ್ಟಪಡಿಸಿದ ದರಗಳಲ್ಲಿ ಮತ್ತು ಷರತ್ತುಗಳ ಮೇಲೆ, ಪ್ರಯಾಣ ಭತ್ಯೆಗೆ ಮತ್ತು ದಿನ ಭತ್ಯೆಗೆ ಅಥವಾ ಇತರ ಭತ್ಯೆಗಳಿಗೆ, ಎಂದರೆ:–

(ಎ) ರೈಲು ಪ್ರಯಾಣಕ್ಕಾಗಿ, ರೈಲಿನಲ್ಲಿ ಲಭ್ಯವಿರುವ ಅತ್ಯುನ್ನತ ದರ್ಜೆಯ ಏಕ ಪ್ರಯಾಣ ದರದ ಎರಡರಷ್ಟಕ್ಕೆ;

(ಬಿ) ರಸ್ತೆ ಪ್ರಯಾಣಕ್ಕಾಗಿ, ರಾಜ್ಯ ಸಿವಿಲ್ ಸೇವೆಗಳ ಅತ್ಯುನ್ನತ ದರ್ಜೆಯ ಅಧಿಕಾರಿಗಳಿಗೆ *ಅನುಮತಿಸಲಾಗುವ ರಸ್ತೆ ಮೈಲು ದರದಷ್ಟಕ್ಕೆ.

(ಸಿ) ವಿಮಾನ ಪ್ರಯಾಣಕ್ಕಾಗಿ, ಅಂಥ ಪ್ರಯಾಣಗಳಿಗೆ ಸಂದಾಯ ಮಾಡಲಾಗುವ ಏಕ ಪ್ರಯಾಣದರದ ಒಂದು ಐದನೇ ಒಂದರಷ್ಟಕ್ಕೆ;

(ಡಿ) ರಾಜ್ಯದೊಳಗಡೆ ಇರುವ ಯಾವುದೇ ಸ್ಥಳದಲ್ಲಿ ಪ್ರಯಾಣ ಮಾಡುವ ದಿನಗಳಿಗೆ ಮತ್ತು ವಾಸ್ತವ್ಯದ ದಿನಗಳಿಗೆ ರಾಜ್ಯ ಸಿವಿಲ್ ಸೇವೆಗಳ ಅತ್ಯುನ್ನತ ದರ್ಜೆಯ ಅಧಿಕಾರಿಗಳಿಗೆ ಅನುಮತಿಸಲಾಗುವ ದರದಲ್ಲಿ ದಿನಭತ್ಯೆಗೆ

– ಹಕ್ಕುಳ್ಳವರಾಗಿರತಕ್ಕದ್ದು:

---

* ಅಧಿಸೂಚನೆ ಸಂ ಡಿಪಿಎಆರ್ 89 ಎಸ್‌ಎಸ್‌ಸಿ 87, ದಿನಾಂಕ 13–11–1987, 1–1–87ರಿಂದ ಪರಿಣಾಮಕಾರಿ

ಪರಂತು, ಒಂದು ಸಲಕ್ಕೆ ಮೂವತ್ತು ದಿನಗಳಿಗೆ ಮೀರಿದ, ಆದರೆ ತೊಂಬತ್ತು ದಿನಗಳಿಗೆ ಮೀರದ ವಾಸ್ತವ್ಯದ ದಿನಗಳಿಗೆ, ಪ್ರತಿಯೊಂದು ದಿನಕ್ಕೆ ದಿನಭತ್ಯೆಯು ಹತ್ತು ರೂಪಾಯಿಗಳಾಗಿರತಕ್ಕದ್ದು:

ಮತ್ತೂ ಪರಂತು, ರಾಜ್ಯಪಾಲರು ನಿರ್ದಿಷ್ಟವಾಗಿ ಅನುಮತಿಸಿದ ಹೊರತು, ಒಂದು ಸಲಕ್ಕೆ ತೊಂಬತ್ತು ದಿನಗಳನ್ನು ಮೀರುವ ವಾಸ್ತವ್ಯದ ದಿನಗಳಿಗೆ ಯಾವುದೇ ದಿನಭತ್ಯೆಯನ್ನು ಅನುಮತಿಸತಕ್ಕದ್ದಲ್ಲ;

ಮತ್ತೂ ಪರಂತು, ಕೇಂದ್ರ ಕಾರ್ಯಸ್ಥಾನದಲ್ಲಿನ ಸಾಮಾನ್ಯ ಕೆಲಸದ ಸ್ಥಳದಿಂದ 8 ಕಿಲೋ ಮೀಟರುಗಳ ಅಂತರದೊಳಗಿನ ಪ್ರಯಾಣಗಳಿಗೆ ಅಥವಾ ವಾಸ್ತವ್ಯಗಳಿಗೆ ಪ್ರಯಾಣ ಭತ್ಯೆಯನ್ನು ಅಥವಾ ದಿನಭತ್ಯೆಯನ್ನು ಅನುಮತಿಸತಕ್ಕದ್ದಲ್ಲ.

(ಇ) ರಾಜ್ಯದ ಹೊರಗಿನ ಯಾವುದೇ ಸ್ಥಳದಲ್ಲಿನ ಪ್ರಯಾಣದ ದಿನಗಳಿಗೆ ಮತ್ತು ವಾಸ್ತವ್ಯದ ದಿನಗಳಿಗೆ ರಾಜ್ಯ ಸಿವಿಲ್ ಸೇವೆಗಳ ಅತ್ಯುನ್ನತ ದರ್ಜೆಯ ಅಧಿಕಾರಿಗಳಿಗೆ *ಅನುಮತಿಸಲಾಗುವ ದರಗಳಲ್ಲಿ ದಿನಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.

(2) ಸದಸ್ಯರಾಗಿ ತನ್ನ ಕರ್ತವ್ಯಗಳಿಗೆ ಹಾಜರಾಗುವ ದಿನಾಂಕಕ್ಕೆ ನಿಕಟಪೂರ್ವದ ದಿನಾಂಕದಂದು ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಸೇವೆಯಲ್ಲಿದ್ದ ಅಥವಾ ಪದಧಾರಣ ಮಾಡಿದ್ದ ಸದಸ್ಯರು, ತಾವು ನೇಮಕಗೊಂಡಿರುವ ಹುದ್ದೆಗೆ ಸೇರಿಕೊಳ್ಳಲು ಮಾಡುವ ಪ್ರಯಾಣಕ್ಕಾಗಿ, ಅವರ ನೇಮಕದ ನಿಕಟಪೂರ್ವದಲ್ಲಿ ಅವರಿಗೆ ಅನ್ವಯವಾಗುತ್ತಿದ್ದ ನಿಯಮಗಳ ಪ್ರಕಾರ ವರ್ಗಾವಣೆ ಮೇಲಿನ ಪ್ರಯಾಣಕ್ಕೆ ಅನುಮತಿಸಲಾಗುವ ದರಗಳಲ್ಲಿ ಪ್ರಯಾಣಭತ್ಯೆಯನ್ನು ಪಡೆಯಬಹುದು.

(3) ಅಧ್ಯಕ್ಷರ ಮತ್ತು ಸದಸ್ಯರ ಪ್ರಯಾಣ ಭತ್ಯೆಯ ಬಿಲ್ಲುಗಳಿಗೆ ಯಾರೇ ಇತರ ಪ್ರಾಧಿಕಾರಿಯ ಮೇಲು ರುಜುವಿನ ಅಗತ್ಯವಿರತಕ್ಕದ್ದಲ್ಲ.

(4) ಸದಸ್ಯರು ರಾಜ್ಯ ಸಿವಿಲ್ ಸೇವೆಯ ಅತ್ಯುನ್ನತ ದರ್ಜೆಯ ಅಧಿಕಾರಿಗಳಿಗೆ ಅನುಮತಿಸಲಾಗುವ ರಜಾ ಪ್ರಯಾಣ ರಿಯಾಯಿತಿಯನ್ನು ಬಳಸಿಕೊಳ್ಳಬಹುದು:

ಪರಂತು, ಆಯೋಗದ ಸದಸ್ಯರಾಗಿರುವುದು ನಿಂತುಹೋಗುವುದಕ್ಕೆ ಮೊದಲು ಆಯೋಗದ ಯಾವ ಸದಸ್ಯರ ಒಟ್ಟು ಸೇವೆಯು ನಾಲ್ಕು ವರ್ಷಗಳಿಗಿಂತ ಕಡಿಮೆಯಾಗುವ ಸಂಭವವಿದೆಯೋ ಆ ಯಾರೇ ಸದಸ್ಯರು ಅಂಥ ರಿಯಾಯಿತಿಗೆ ಹಕ್ಕುಳ್ಳವರಾಗಿರತಕ್ಕದ್ದಲ್ಲ:

ಮತ್ತೂ ಪರಂತು, ಆಯೋಗದ ಸದಸ್ಯರಾಗಿ ಅವರು ನೇಮಕಗೊಳ್ಳುವುದಕ್ಕೆ ಮುಂಚೆ ಭಾರತದಲ್ಲಿನ ಯಾವುದೇ ಸ್ಥಳಕ್ಕೆ ಪ್ರಯಾಣ ಮಾಡುವುದಕ್ಕಾಗಿ ರಜಾ ಪ್ರಯಾಣ ರಿಯಾಯಿತಿಯ ಪ್ರಯೋಜನವನ್ನು ಬಳಸಿಕೊಂಡಿರುವ ಅಧಿಕಾರಿಯು ನಾಲ್ಕು ವರ್ಷಗಳ ಆ ನಿರ್ದಿಷ್ಟ ಬ್ಲಾಕ್ ಅವಧಿಯು ಮುಕ್ತಾಯವಾಗುವವರೆಗೆ ಮತ್ತೆ ಆ ರಿಯಾಯಿತಿಗೆ ಅರ್ಹರಾಗಿರತಕ್ಕದ್ದಲ್ಲ.

---

* ಅಧಿಸೂಚನೆ ಸಂ. ಡಿಪಿಎಆರ್ 89 ಎಸ್ಎಸ್‌ಸಿ 87, ದಿನಾಂಕ 13-11-1987, 1-1-87 ರಿಂದ ಪರಿಣಾಮಕಾರಿ

** **8. ವಾಹನ ಸೌಲಭ್ಯ:–** ಅಧ್ಯಕ್ಷರಿಗೆ ಮತ್ತು ಪ್ರತಿಯೊಬ್ಬ ಸದಸ್ಯರಿಗೆ, ಅವರ ವಾಹನ ಸೌಲಭ್ಯಕ್ಕಾಗಿ ಒಂದು ಮೋಟಾರು ಕಾರನ್ನು ಒದಗಿಸತಕ್ಕದ್ದು ಮತ್ತು ಪ್ರತಿ ತಿಂಗಳು, ಒಂದು ನೂರು ಲೀಟರುಗಳ ಪೆಟ್ರೋಲ್ ವೆಚ್ಚಕ್ಕೆ ಸಮನಾದ ಮೊಬಲಗನ್ನು ಅಥವಾ ವಾಸ್ತವವಾಗಿ ಬಳಸಿದ ಪೆಟ್ರೋಲಿನ ವೆಚ್ಚವನ್ನು, ಇದರಲ್ಲಿ ಯಾವುದು ಕಡಿಮೆಯೋ ಅಷ್ಟನ್ನು ಸಂದಾಯ ಮಾಡತಕ್ಕದ್ದು.

9. (i) ಸದಸ್ಯರು ತಮ್ಮ ಪ್ರಕಾರ್ಯಗಳ ನೆರವೇರಿಕೆಗಾಗಿ ರಸ್ತೆ ಮೂಲಕವಾಗಲೀ, ರೈಲು ಮೂಲಕವಾಗಲೀ ಅಥವಾ ವಿಮಾನದ ಮೂಲಕವಾಗಲೀ, ಅವರು ಕೈಗೊಂಡ ಪ್ರಯಾಣದ ಸಂಬಂಧದಲ್ಲಿ ಪ್ರಯಾಣ ಭತ್ಯೆಯ ಮತ್ತು ದಿನ ಭತ್ಯೆಯ ಮುಂಗಡಕ್ಕೆ ಹಕ್ಕುಳ್ಳವರಾಗಿರತಕ್ಕದ್ದು.

(ii) ಪಡೆಯಲಾದ ಮುಂಗಡವನ್ನು, ಮುಂಗಡವನ್ನು ಯಾವ ತಿಂಗಳಲ್ಲಿ ಪಡೆಯಲಾಗಿದೆಯೋ ಆ ತಿಂಗಳಿನ ನಂತರದ ತಿಂಗಳು ಕೊನೆಗೊಳ್ಳುವುದಕ್ಕೆ ಮುಂಚೆ ಸೂಕ್ತ ಪ್ರಯಾಣ ಭತ್ಯೆಯ ಬಿಲ್ಲಿನಲ್ಲಿ ಹೊಂದಾಣಿಕೆ ಮಾಡತಕ್ಕದ್ದು.

**9ಎ. ಆತಿಥ್ಯ ಭತ್ಯೆ:–** ಅಧ್ಯಕ್ಷರಿಗೆ, ವರ್ಷಕ್ಕೆ ನಾಲ್ಕು ಸಾವಿರದ ಎಂಟು ನೂರು ರೂಪಾಯಿಗಳ ಆತಿಥ್ಯ ಭತ್ಯೆಯನ್ನು ಸಂದಾಯ ಮಾಡತಕ್ಕದ್ದು*.

## ಭಾಗ V – ವೈದ್ಯಕೀಯ ಚಿಕಿತ್ಸೆ

10. ಸದಸ್ಯರು, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1957ರ ಮೇರೆಗೆ ರಾಜ್ಯ ಸಿವಿಲ್ ಸೇವೆಯ ಅತ್ಯುನ್ನತ ದರ್ಜೆಯ ಅಧಿಕಾರಿಗಳಿಗೆ ಕಾಲಕಾಲಕ್ಕೆ ಗೊತ್ತುಪಡಿಸಿದ ವೈದ್ಯಕೀಯ ಚಿಕಿತ್ಸೆ ಸೌಲಭ್ಯಗಳಿಗೆ ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ಸದಸ್ಯರಾಗಿ ತನ್ನ ಕರ್ತವ್ಯಗಳಿಗೆ ಹಾಜರಾಗುವ ದಿನಾಂಕದ ನಿಕಟಪೂರ್ವದಲ್ಲಿ, ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಸೇವೆಯಲ್ಲಿದ್ದ ಅಥವಾ ಹುದ್ದೆಯನ್ನು ಧಾರಣ ಮಾಡಿದ್ದ ಸದಸ್ಯರು, ಅಂಥ ಸೇವೆಯಿಂದ ಅಥವಾ ಹುದ್ದೆಯಿಂದ ನಿವೃತ್ತರಾಗುವವರೆಗೆ, ಸದಸ್ಯರಾಗಿ ತನ್ನ ಕರ್ತವ್ಯಗಳಿಗೆ ಹಾಜರಾಗುವ ದಿನಾಂಕದಿಂದ ಒಂದು ತಿಂಗಳ ಒಳಗೆ ಅದೇ ವೈದ್ಯಕೀಯ ಚಿಕಿತ್ಸೆ ನಿಯಮಗಳಿಗೆ ಒಳಪಡಲು, ಅವರು ಆಯ್ಕೆ ಮಾಡಿಕೊಂಡರೆ, ಅಂಥ ಸೇವೆಯಲ್ಲಿ ಅಥವಾ ಹುದ್ದೆಯಲ್ಲಿ ಅವರಿಗೆ ಅನ್ವಯವಾಗಬಹುದಾದ ಅಂಥ ನಿಯಮಗಳಿಗೆ ಒಳಪಡತಕ್ಕದ್ದು:–

10ಎ. 10ನೇ ವಿನಿಯಮದಲ್ಲಿ ಅಥವಾ ಈ ವಿನಿಯಮಗಳಿಂದ ರದ್ದುಗೊಳಿಸಲಾದ ಯಾವುದೇ ವಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಭಾರತೀಯ ಆಡಳಿತ ಸೇವೆಯ ಸದಸ್ಯರಾಗಿರುವ ಆಯೋಗದ ಸದಸ್ಯರು,–

(ಎ) ಸದಸ್ಯರಾಗಿ ತನ್ನ ಕರ್ತವ್ಯಗಳಿಗೆ ಹಾಜರಾಗುವ ದಿನಾಂಕದಿಂದ ಮತ್ತು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1957ರ ಪ್ರಾರಂಭದವರೆಗೆ ಭಾರತೀಯ ಆಡಳಿತ ಸೇವೆಯಲ್ಲಿ ಅವರಿಗೆ ಅನ್ವಯವಾಗುವ ವೈದ್ಯಕೀಯ ಚಿಕಿತ್ಸೆ ನಿಯಮಗಳಿಗೆ ಒಳಪಡತಕ್ಕದ್ದು; ಮತ್ತು

---

** ನೋಡಿ ಅಧಿಸೂಚನೆ ಸಂ ಡಿಪಿಎಆರ್ 3 ಎಸ್ಎಸ್‌ಸಿ 95, ದಿನಾಂಕ 3–7–1999.

* ನೋಡಿ ಅಧಿಸೂಚನೆ ಸಂ ಡಿಪಿಎಆರ್ 42 ಎಸ್ಎಸ್‌ಸಿ 95, ದಿನಾಂಕ 11–7–1996.

(ಬಿ) ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1957ರ ಪ್ರಾರಂಭದ ದಿನಾಂಕದಿಂದ ಮತ್ತು ಅವರು ಭಾರತೀಯ ಆಡಳಿತ ಸೇವೆಯಿಂದ ನಿವೃತ್ತರಾಗುವವರೆಗೆ, ಭಾರತೀಯ ಆಡಳಿತ ಸೇವೆಯ ಸದಸ್ಯರಿಗೆ ಅನ್ವಯವಾಗುವ ವೈದ್ಯಕೀಯ ಚಿಕಿತ್ಸೆ ನಿಯಮಗಳಿಗೆ ಅಥವಾ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಚಿಕಿತ್ಸೆ) ನಿಯಮಗಳು, 1957ಕ್ಕೆ ಅವರ ಆಯ್ಕೆಯಂತೆ ಒಳಪಡತಕ್ಕದ್ದು (ಆ ಆಯ್ಕೆಯನ್ನು ಒಂದನೇ ಆಗಸ್ಟ್ 1959ಕ್ಕೆ ಮುಂಚೆ ಚಲಾಯಿಸಿರತಕ್ಕದ್ದು).

## ಭಾಗ VI- ನಿವೃತ್ತಿ ವೇತನ

11. (1) ಈ ವಿನಿಯಮಗಳ ಉಪಬಂಧಗಳಿಗೊಳಪಟ್ಟು, ಪ್ರತಿಯೊಬ್ಬ ಸದಸ್ಯರಿಗೆ, ಹಾಗೆ ಸದಸ್ಯರಾಗಿ ಅವರು ಪದಧಾರಣ ಮಾಡಿರುವುದು ನಿಂತುಹೋದಾಗ (3)ನೇ ಖಂಡದಲ್ಲಿನ ಶ್ರೇಣಿಗೆ ಮತ್ತು ಉಪಬಂಧಗಳಿಗೆ ಅನುಸಾರವಾಗಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು:

ಪರಂತು, ಸದಸ್ಯರಿಗೆ,–

(ಎ) ನಿವೃತ್ತಿ ವೇತನಕ್ಕೆ, ಅವರು ಮೂರು ವರ್ಷಗಳಿಗೆ ಕಡಿಮೆ ಇಲ್ಲದ ಸೇವೆಯನ್ನು ಪೂರ್ಣಗೊಳಿಸಿದ್ದ ಹೊರತು

ಅಥವಾ

(ಬಿ) ಅವರನ್ನು ಆ ಸದಸ್ಯ ಪದದಿಂದ ತೆಗೆದುಹಾಕಿದ್ದರೆ

–ಅಂಥ ಯಾವುದೇ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದಲ್ಲ.

(2) ಈ ವಿನಿಯಮಗಳ ಉಪಬಂಧಗಳಿಗೊಳಪಟ್ಟು, ನಿವೃತ್ತಿ ವೇತನವನ್ನು ಸದಸ್ಯರಿಗೆ ಜೀವನ ಪರ್ಯಂತ ಸಂದಾಯ ಮಾಡತಕ್ಕದ್ದು:

ಪರಂತು, ನಿವೃತ್ತಿ ವೇತನಕ್ಕೆ ಹಕ್ಕುಳ್ಳ ವ್ಯಕ್ತಿಯು, ಅಧ್ಯಕ್ಷ ಪದಕ್ಕೆ ನೇಮಕಗೊಂಡಿರುವಲ್ಲಿ, ಅವರು ಅಧ್ಯಕ್ಷರಾಗಿ ಪದಧಾರಣ ಮಾಡಿದ ಅವಧಿಗೆ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದಲ್ಲ ಮತ್ತು ಆ ಪದವನ್ನು ಧಾರಣ ಮಾಡಿರುವುದು ನಿಂತುಹೋದ ನಂತರ, ಅವರು ಯಾವ ನಿವೃತ್ತಿ ವೇತನಕ್ಕೆ ಹಕ್ಕುಳ್ಳವರಾಗಿದ್ದರೋ ಆ ನಿವೃತ್ತಿ ವೇತನವನ್ನು ಅಧ್ಯಕ್ಷರಾಗಿ ಪದಧಾರಣ ಮಾಡಿರುವುದು ನಿಂತುಹೋದ ನಂತರ, ಅವರಿಗೆ ಸಂದಾಯ ಮಾಡಬೇಕಾಗಿರುವ ನಿವೃತ್ತಿ ವೇತನ ಯಾವುದಾದರೂ ಇದ್ದರೆ, ಅದರಲ್ಲಿ ವಿಲೀನಗೊಳಿಸತಕ್ಕದ್ದು:

ಮತ್ತೂ ಪರಂತು, ನಿವೃತ್ತಿ ವೇತನಕ್ಕೆ ಹಕ್ಕುಳ್ಳ ವ್ಯಕ್ತಿಯು, ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರಾಗಿ ಅಥವಾ ಸದಸ್ಯರಾಗಿ ಅಥವಾ ಕರ್ನಾಟಕ ಲೋಕಸೇವಾ ಆಯೋಗದ ಹೊರತು ಬೇರೆ ಯಾವುದೇ ರಾಜ್ಯ ಲೋಕ ಸೇವಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿರುವಲ್ಲಿ, ಸಂದರ್ಭಾನುಸಾರ, ಅವರು, ಕೇಂದ್ರ ಲೋಕಸೇವಾ ಆಯೋಗದ ಅಥವಾ ಯಾವುದೇ ರಾಜ್ಯ ಲೋಕ ಸೇವಾ ಆಯೋಗದ ಅಧ್ಯಕ್ಷರ ಅಥವಾ ಸದಸ್ಯರ ಪದವನ್ನು ಧಾರಣ ಮಾಡಿದ ಅವಧಿಗೆ ಅಂಥ ವ್ಯಕ್ತಿಗೆ ಯಾವುದೇ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದಲ್ಲ.

(3) ಈ ವಿನಿಯಮದ ಮೇರೆಗೆ ಸಂದಾಯ ಮಾಡತಕ್ಕ ನಿವೃತ್ತಿ ವೇತನವನ್ನು ಈ ಮುಂದಿನ ಶ್ರೇಣಿಗನುಸಾರವಾಗಿ ಸಂದಾಯ ಮಾಡತಕ್ಕದ್ದು, ಎಂದರೆ:–

*(i) ಅಧ್ಯಕ್ಷರ ಸಂದರ್ಭದಲ್ಲಿ, ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ಮೊದಲ ಮೂರು ವರ್ಷಗಳ ಸೇವೆಗೆ ವರ್ಷಕ್ಕೆ 18,240 ರೂ.ಗಳು ಮತ್ತು ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ತರುವಾಯದ ಪ್ರತಿಯೊಂದು ಸೇವಾ ವರ್ಷಕ್ಕೆ ನಿವೃತ್ತಿ ವೇತನದ ಒಟ್ಟು ಮೊತ್ತವು 29,640 ರೂ.ಗಳನ್ನು ಮೀರತಕ್ಕದ್ದಲ್ಲ ಎಂಬ ಷರತ್ತಿಗೆ ಒಳಪಟ್ಟು, ಪ್ರತಿ ವರ್ಷಕ್ಕೆ 4,560 ರೂ.ಗಳ ಹೆಚ್ಚಿನ ಮೊತ್ತ;

*(ii) ಅಧ್ಯಕ್ಷರನ್ನು ಹೊರತುಪಡಿಸಿ ಇತರ ಸದಸ್ಯರ ಸಂದರ್ಭದಲ್ಲಿ, ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ಮೊದಲ ಮೂರು ವರ್ಷಗಳ ಸೇವೆಗೆ ವರ್ಷಕ್ಕೆ 15,360 ರೂ.ಗಳು ಮತ್ತು ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ತರುವಾಯದ ಪ್ರತಿಯೊಂದು ಸೇವಾ ವರ್ಷಕ್ಕೆ ನಿವೃತ್ತಿ ವೇತನದ ಒಟ್ಟು ಮೊತ್ತವು 24,960 ರೂ.ಗಳನ್ನು ಮೀರತಕ್ಕದ್ದಲ್ಲ ಎಂಬ ಷರತ್ತಿಗೆ ಒಳಪಟ್ಟು ಪ್ರತಿ ವರ್ಷಕ್ಕೆ 3,840 ರೂ.ಗಳ ಹೆಚ್ಚಿನ ಮೊತ್ತ.

**ವಿವರಣೆ–I:–** ನಿವೃತ್ತಿ ವೇತನಕ್ಕೆ ಸೇವಾವಧಿಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಆರು ತಿಂಗಳಿಗಿಂತ ಕಡಿಮೆ ಇರುವ ವರ್ಷದ ಭಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಆರು ತಿಂಗಳುಗಳನ್ನು ಅಥವಾ ಅದಕ್ಕಿಂತ ಹೆಚ್ಚಿನ ಅವಧಿಯನ್ನು ಒಂದು ವರ್ಷವೆಂದು ಲೆಕ್ಕಹಾಕತಕ್ಕದ್ದು.

**ವಿವರಣೆ–II:–** ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ಒಟ್ಟು ಸೇವೆಯನ್ನು ಭಾಗಶಃ ಸದಸ್ಯರಾಗಿ, ಭಾಗಶಃ ಅಧ್ಯಕ್ಷರಾಗಿ ವ್ಯಕ್ತಿಯು ಸಲ್ಲಿಸಿರುವಾಗ, ಅಂಥ ಪ್ರತಿಯೊಂದು ಪದದಲ್ಲಿ ಅಂಥ ವ್ಯಕ್ತಿಗೆ ಅನುಮತಿಸಲಾಗುವ ನಿವೃತ್ತಿ ವೇತನವನ್ನು, ಒಟ್ಟು ನಿವೃತ್ತಿ ವೇತನವು, ಅಧ್ಯಕ್ಷರಿಗೆ ಅನುಮತಿಸಲಾಗುವ ನಿವೃತ್ತಿ ವೇತನವನ್ನು ಮೀರತಕ್ಕದ್ದಲ್ಲ ಎಂಬ ಷರತ್ತಿಗೆ ಒಳಪಟ್ಟು ಪ್ರತ್ಯೇಕವಾಗಿ ಲೆಕ್ಕ ಹಾಕತಕ್ಕದ್ದು.

**ವಿವರಣೆ–III** :– ನಿವೃತ್ತಿ ವೇತನಕ್ಕೆ ಪರಿಗಣಿಸುವಂಥ ಮೂರು ವರ್ಷಗಳಿಗೆ ಕಡಿಮೆಯಿಲ್ಲದಷ್ಟು ಸೇವೆಯನ್ನು ಪೂರ್ಣಗೊಳಿಸಿರುವ ವ್ಯಕ್ತಿಯು, ತನ್ನ ಪದಕ್ಕೆ ರಾಜೀನಾಮೆ ಸಲ್ಲಿಸಿದಲ್ಲಿ ಮತ್ತು ಅಂಥ ರಾಜೀನಾಮೆಯನ್ನು ರಾಜ್ಯಪಾಲರು ಅಂಗೀಕರಿಸಿದಲ್ಲಿ, ಅಂಥ ಸದಸ್ಯರಿಗೆ ಈ ವಿನಿಮಯಗಳಿಗನುಸಾರವಾಗಿ ನಿವೃತ್ತಿ ವೇತನವನ್ನು ಸಂದಾಯ ಮಾಡತಕ್ಕದ್ದು.

(4) ಈ ವಿನಿಯಮಗಳ ಮೇರೆಗೆ ಯಾವ ವ್ಯಕ್ತಿಗೆ ನಿವೃತ್ತಿ ವೇತನವನ್ನು ಮಂಜೂರು ಮಾಡಲಾಗಿದೆಯೋ ಆ ವ್ಯಕ್ತಿಯು, ರಾಜ್ಯ ಸೇವಾ ನಿವೃತ್ತಿದಾರರಿಗೆ ಕಾಲಕಾಲಕ್ಕೆ ಅನುಮತಿಸಲಾಗುವ ದರಗಳಲ್ಲಿ ತುಟ್ಟಿಭತ್ಯೆ ಮತ್ತು ಸಂಕಷ್ಟ–ಭತ್ಯೆಯ ಸಂದಾಯವನ್ನು ಸ್ವೀಕರಿಸಲು ಸಹ ಅರ್ಹರಾಗಿರತಕ್ಕದ್ದು.

---

* ಅಧಿಸೂಚನೆ ಸಂ ಡಿಪಿಎಆರ್ 17 ಎಸ್‌ಎಸ್‌ಸಿ 2000, ದಿನಾಂಕ 3–2–2007ರ ಮೂಲಕ ಪ್ರತಿಯೋಜಿಸಲಾಗಿದೆ.

11ಎ. (1) ಸದಸ್ಯರಾಗಿ ತಾನು ನೇಮಕಗೊಂಡ ಕಾಲದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿದ್ದ ಸದಸ್ಯರು, ತನ್ನ ನೇಮಕದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಅಥವಾ ಈ ವಿನಿಮಯಗಳ ಪ್ರಕಟಣೆಯ ದಿನಾಂಕದಿಂದ ಎರಡು ವರ್ಷಗಳ ಅವಧಿಯೊಳಗೆ ಇವುಗಳಲ್ಲಿ ಯಾವುದು ನಂತರದ್ದೋ ಆ ಅವಧಿಯೊಳಗೆ ಚಲಾಯಿಸಬೇಕಾದ ತನ್ನ ಆಯ್ಕೆಯಂತೆ, ಸದಸ್ಯರಾಗಿ ತನ್ನ ನೇಮಕದ ದಿನಾಂಕದಿಂದ ಪರಿಣಮಿಸುವಂತೆ ತಾನು ಯಾವ ಸೇವೆಗೆ ಸೇರಿದ್ದರೋ ಆ ಸೇವೆಗೆ ಅನ್ವಯವಾಗಬಹುದಾದ ನಿಯಮಗಳ ಮೇರೆಗೆ ತನ್ನ ನಿವೃತ್ತಿ ವೇತನವನ್ನು ಮತ್ತು ಇತರ ನಿವೃತ್ತಿ ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು:

ಪರಂತು, ಅಂಥ ಸಂದರ್ಭದಲ್ಲಿ,–

(ಎ) ಸದಸ್ಯರಾಗಿ ಅವರ ವೇತನವನ್ನು, ಒಟ್ಟು ನಿವೃತ್ತಿ ವೇತನಕ್ಕೆ (ಪರಿವರ್ತನೆಗೊಳಿಸಿರಬಹುದಾದ ನಿವೃತ್ತಿ ವೇತನದ ಯಾವುದೇ ಭಾಗವೂ ಸೇರಿದಂತೆ) ಮತ್ತು ಇತರ ನಿವೃತ್ತಿ ಪ್ರಯೋಜನಗಳಿಗೆ ಸಮನಾದ ನಿವೃತ್ತಿ ವೇತನಕ್ಕೆ ಇವುಗಳಿಗೆ ಸಮಾನವಾದ ಮೊಬಲಗಿನಷ್ಟು ಕಡಿಮೆ ಮಾಡತಕ್ಕದ್ದು ಹಾಗೂ ಅವರು ತನ್ನ ನಿವೃತ್ತಿ ವೇತನವನ್ನು ಮತ್ತು ಇತರ ನಿವೃತ್ತಿ ಪ್ರಯೋಜನಗಳನ್ನು ಪ್ರತ್ಯೇಕವಾಗಿ ಪಡೆಯಲು ಹಕ್ಕುಳ್ಳವರಾಗಿರತಕ್ಕದ್ದು; ಮತ್ತು

(ಬಿ) ವಿನಿಯಮ 11ರ ಮೇರೆಗೆ ನಿವೃತ್ತಿ ವೇತನಕ್ಕೆ ಅಥವಾ ಸದಸ್ಯರಾಗಿ ತನ್ನ ಸೇವೆಗೆ ಸಂಬಂಧಿಸಿದಂತೆ ಇತರ ಯಾವುದೇ ನಿವೃತ್ತಿ ವೇತನಕ್ಕೆ ಹಕ್ಕುಳ್ಳವರಾಗಿರತಕ್ಕದ್ದಲ್ಲ.

(2) ಸದಸ್ಯರು, ಸದಸ್ಯರಾಗಿ ನೇಮಕಗೊಂಡ ಕಾಲದಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿದ್ದು, ಮೇಲಿನ (1)ನೇ ಖಂಡದಲ್ಲಿ ತಿಳಿಸಿದ ಆಯ್ಕೆಯನ್ನು ಚಲಾಯಿಸದಿದ್ದರೆ, ಅವರ ನೇಮಕಕ್ಕೆ ನಿಕಟಪೂರ್ವದಲ್ಲಿ ಅವರು ಯಾವ ಸೇವೆಗೆ ಸೇರಿದ್ದರೋ ಆ ಸೇವೆಗೆ ಅನ್ವಯವಾಗಬಹುದಾದ ನಿಯಮಗಳ ಮೇರೆಗೆ ನಿವೃತ್ತಿ ವೇತನಕ್ಕೆ ಮತ್ತು ನಿವೃತ್ತಿ ಪ್ರಯೋಜನಗಳಿಗೆ ಸದಸ್ಯರಾಗಿ ಅವರು ಸಲ್ಲಿಸಿದ ಸೇವೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ನಿವೃತ್ತಿ ವೇತನವನ್ನು ಮತ್ತು ನಿವೃತ್ತಿ ಪ್ರಯೋಜನಗಳನ್ನು ಅವರು ಸದಸ್ಯರಾಗಿರುವುದು ನಿಂತು ಹೋದ ದಿನಾಂಕದಿಂದ ಜಾರಿಗೆ ಬರುವಂತೆ ಅನುಮತಿಸತಕ್ಕದ್ದು:

ಪರಂತು, ಅನುಮತಿಸಲಾಗುವ ನಿವೃತ್ತಿ ವೇತನವನ್ನು ಮತ್ತು ನಿವೃತ್ತಿ ಪ್ರಯೋಜನಗಳನ್ನು, ಅವರು ಸದಸ್ಯರಾಗಿ ನೇಮಕ ಗೊಂಡಿರದಿದ್ದರೆ ಅನುಮತಿಸಲಾಗುತ್ತಿದ್ದ ನಿವೃತ್ತಿ ವೇತನಕ್ಕೆ ಮತ್ತು ನಿವೃತ್ತಿ ಪ್ರಯೋಜನಗಳಿಗೆ ಸೀಮಿತಗೊಳಿಸತಕ್ಕದ್ದು.

11ಬಿ. ಈ ವಿನಿಯಮಗಳಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ರಾಜ್ಯ ಸಿವಿಲ್ ಸೇವೆಗಳ ಅತ್ಯುನ್ನತ ದರ್ಜೆಯ ಅಧಿಕಾರಿಗೆ ಸಂದಾಯ ಮಾಡಲಾಗುವ ನಿವೃತ್ತಿ ವೇತನಕ್ಕೆ ಅನ್ವಯವಾಗುವ ಕರ್ನಾಟಕ ಸಿವಿಲ್ ಸೇವಾ ನಿಯಮಗಳು, 1958ರ ಭಾಗ –IVರ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ ಸದಸ್ಯರ ನಿವೃತ್ತಿ ವೇತನಗಳ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು.

11ಸಿ. (1) ಪ್ರತಿಯೊಬ್ಬ ಸದಸ್ಯರು, ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಗೆ ಅನ್ವಯವಾಗುವ ನಿಯಮಗಳಿಗೆ ಅಥವಾ ಆದೇಶಗಳಿಗೆ ಅನುಸಾರವಾಗಿ ತನ್ನ ಆಯ್ಕೆಯಂತೆ ಆ ನಿಧಿಗೆ ವಂತಿಗೆ ನೀಡಬಹುದು.

(2) ಸದಸ್ಯರಾಗಿ ಆಯೋಗಕ್ಕೆ ನೇಮಕಗೊಂಡ ದಿನಾಂಕದಂದು, ಕೇಂದ್ರ ಅಥವಾ ರಾಜ್ಯ ಸರ್ಕಾರದ ಸೇವೆಯಲ್ಲಿದ್ದ ಮತ್ತು ಯಾವುದೇ ಭವಿಷ್ಯ ನಿಧಿಗೆ ವಂತಿಗೆ ನೀಡುತ್ತಿದ್ದ ಸದಸ್ಯರು (1)ನೇ ಖಂಡದ ಮೇರೆಗೆ ಆಯ್ಕೆಯನ್ನು ಚಲಾಯಿಸಿದರೆ, ನಿಯೋಜಕನ ವಂತಿಗೆ ಯಾವುದಾದರೂ ಇದ್ದರೆ ಅಂಥ ಭವಿಷ್ಯನಿಧಿಯ ಲೆಕ್ಕದಲ್ಲಿ ಆತನ ಖಾತೆಯಲ್ಲಿದ್ದ ಶಿಲ್ಕನ್ನು ಮತ್ತು ಅದರ ಮೇಲಿನ ಬಡ್ಡಿಯನ್ನು ಕರ್ನಾಟಕ ಸಾಮಾನ್ಯ ಭವಿಷ್ಯ ನಿಧಿಗೆ ಅಂಥ ನಿಧಿಯಲ್ಲಿ ಆತನ ಖಾತೆಯ ಆರಂಭದ ಶಿಲ್ಕಾಗಿ ವರ್ಗಾಯಿಸತಕ್ಕದ್ದು.

## ಭಾಗ – VII – ಸಿಬ್ಬಂದಿ

12. (1) ಆಯೋಗದ ಸಿಬ್ಬಂದಿಯು, ಈ ವಿನಿಯಮಗಳ ಅನುಬಂಧ–Iರಲ್ಲಿ ನಿರ್ದಿಷ್ಟಪಡಿಸಿರುವಷ್ಟು ಸಂಖ್ಯೆಯ I, II, III ಮತ್ತು IVನೇ ದರ್ಜೆಯ, ಪ್ರವರ್ಗಗಳ ಮತ್ತು ಶ್ರೇಣಿಗಳ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು. ಪ್ರತಿಯೊಂದು ಪ್ರವರ್ಗದ ಹುದ್ದೆಗಳಿಗೆ ನೇಮಕಾತಿ ವಿಧಾನವು ಮತ್ತು ನೇಮಕಕ್ಕೆ ಅರ್ಹತೆಗಳು ಈ ವಿನಿಯಮಗಳ ಅನುಬಂಧ I (ಎ)ಯಲ್ಲಿ ಗೊತ್ತುಪಡಿಸಿರುವಂತೆ ಇರತಕ್ಕದ್ದು.

(2) (1)ನೇ ಖಂಡದಲ್ಲಿ ಏನೇ ಒಳಗೊಂಡಿದ್ದರೂ, ಆಯೋಗವು,–

(ಎ) ರಾಜ್ಯಪಾಲರ ಪೂರ್ವಾನುಮೋದನೆಗೊಳಪಟ್ಟು, ತಾನು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಹೆಚ್ಚುವರಿ ಸಂಖ್ಯೆಯಷ್ಟು ಸಹಾಯಕ ಕಾರ್ಯದರ್ಶಿಗಳನ್ನು ಅಂಥ ಅವಧಿಗೆ ನೇಮಕ ಮಾಡಬಹುದು;

(ಬಿ) ಈ ವಿನಿಯಮಗಳ IIನೇ ಅನುಬಂಧದ ಉಪಬಂಧಗಳಿಗೊಳಪಟ್ಟು, ಕೆಲಸದಲ್ಲಿ ಸಾಂದರ್ಭಿಕವಾಗಿ ಅಥವಾ ಆಗಾಗ ಉಂಟಾಗುವ ಹೆಚ್ಚಳವನ್ನು ನಿರ್ವಹಿಸಲು, ತಾನು ಅಗತ್ಯವೆಂದು ಭಾವಿಸಬಹುದಾದಂಥ IIIನೇ ದರ್ಜೆಯ ಮತ್ತು IVನೇ ದರ್ಜೆಯ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬಹುದು.

13. (ಎ) Iನೇ ದರ್ಜೆಯ ಹುದ್ದೆಗಳಿಗೆ ನೇಮಕಗಳನ್ನು, ಆಯೋಗವು ರಾಜ್ಯಪಾಲರ ಪೂರ್ವಾನುಮೋದನೆ ಪಡೆದು ಮಾಡತಕ್ಕದ್ದು.

(ಬಿ) IIನೇ ದರ್ಜೆಯ ಹುದ್ದೆಗಳಿಗೆ ನೇಮಕಗಳನ್ನು ಆಯೋಗವು ಮಾಡತಕ್ಕದ್ದು.

(ಸಿ) IIIನೇ ದರ್ಜೆಯ ಮತ್ತು IVನೇ ದರ್ಜೆಯ ಹುದ್ದೆಗಳಿಗೆ ನೇಮಕಗಳನ್ನು, ಅಧ್ಯಕ್ಷರ ಅನುಮೋದನೆಗೊಳಪಟ್ಟು, ಕಾರ್ಯದರ್ಶಿ – ಹಾಗೂ – ಇಲಾಖಾ ಪರೀಕ್ಷೆಗಳ ನಿಯಂತ್ರಕರು ಮಾಡತಕ್ಕದ್ದು.

14. ಕಾರ್ಯದರ್ಶಿಯು, ಪ್ರಯಾಣ ಭತ್ಯೆಗಳನ್ನು, ರಜೆ ಸಂಬಳವನ್ನು, ನಿವೃತ್ತಿ ವೇತನವನ್ನೂ ಒಳಗೊಂಡಂತೆ ತನ್ನ ವೇತನ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳ ವಿಷಯದಲ್ಲಿ, ಸಂದರ್ಭಾನುಸಾರ ಭಾರತೀಯ ಆಡಳಿತ ಸೇವೆ (ಹಿರಿಯ ಶ್ರೇಣಿ) ಸದಸ್ಯರಿಗೆ ಅಥವಾ ಭಾ.ಆ.ಸೇವೆಯೇತರ ಹಿರಿಯ ಕರ್ತವ್ಯ ಹುದ್ದೆಗಳನ್ನು ಧಾರಣ ಮಾಡಿರುವ ಕರ್ನಾಟಕ ಆಡಳಿತ ಸೇವಾ ಸದಸ್ಯರುಗಳಿಗೆ ತತ್ಕಾಲದಲ್ಲಿ ಅನ್ವಯವಾಗುವಂಥವೇ ನಿಯಮಗಳಿಗೆ ಒಳಪಡತಕ್ಕದ್ದು.

15. (1) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957, ಭಾರತೀಯ ಆಡಳಿತ ಸೇವೆಯೇತರ ಹಿರಿಯ ಶ್ರೇಣಿ, ಕರ್ತವ್ಯದ ಹುದ್ದೆಯನ್ನು ಧಾರಣ ಮಾಡಿರುವ ಅಧಿಕಾರಿಗೆ ಅವು ಅನ್ವಯವಾಗುವ ರೀತಿಯಲ್ಲಿಯೇ ಕಾರ್ಯದರ್ಶಿಗೆ ಅನ್ವಯವಾಗತಕ್ಕದ್ದು:

ಪರಂತು, ಕಾರ್ಯದರ್ಶಿಯು ಭಾರತೀಯ ಆಡಳಿತ ಸೇವೆಯ ಸದಸ್ಯರಾಗಿದ್ದರೆ, ಅವರಿಗೆ ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957, ಅನ್ವಯವಾಗತಕ್ಕದ್ದಲ್ಲ.

(2) ಆಯೋಗವು, Iನೇ ಮತ್ತು II ನೇ ದರ್ಜೆಯ ಅಧಿಕಾರಿಗಳಿಗೆ (ಅಧಿಕಾರಿಯು ಪ್ರತಿನಿಯೋಜನೆಯ ಮೇಲಿರುವಾಗ ಹೊರತು) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದ (ii) ರಿಂದ (viii) ರವರೆಗಿನ ಖಂಡಗಳಲ್ಲಿರುವ ದಂಡನೆಗಳ ಪೈಕಿ ಯಾವುದೇ ದಂಡನೆಯನ್ನು ವಿಧಿಸಬಹುದಾದ ಪ್ರಾಧಿಕಾರಿಯಾಗಿರತಕ್ಕದ್ದು. ಯಾವುದೇ ದಂಡನೆಯನ್ನು ವಿಧಿಸಿ ಆಯೋಗವು ಹೊರಡಿಸಿದ ಯಾವುದೇ ಆದೇಶದ ವಿರುದ್ಧ ರಾಜ್ಯಪಾಲರಿಗೆ ಅಪೀಲನ್ನು ಸಲ್ಲಿಸಬಹುದು.

16. (1) ಆಯೋಗದ ಸಿಬ್ಬಂದಿ ಸದಸ್ಯರುಗಳ ಸೇವಾ ಷರತ್ತುಗಳು, 15ನೇ ವಿನಿಯಮದಲ್ಲಿ ಒಳಗೊಂಡಿರುವವುಗಳನ್ನು ಹೊರತುಪಡಿಸಿ, ಈ ವಿನಿಯಮಗಳಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು ಆಯೋಗದ ಕಚೇರಿಯಲ್ಲಲ್ಲದೆ ಬೇರೆ ಕಡೆಗಳಲ್ಲಿ ಸಂವಾದಿ ಹುದ್ದೆಗಳನ್ನು ಧಾರಣ ಮಾಡಿರುವ ಸರ್ಕಾರಿ ನೌಕರರ ಸಂಬಂಧದಲ್ಲಿ ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಿರುವಂಥವುಗಳೇ ಆಗಿರತಕ್ಕದ್ದು. ಇದನ್ನುಳಿದು ಕರ್ನಾಟಕ ಸಿವಿಲ್ ಸೇವಾ ನಿಯಮಗಳ 285ನೇ ನಿಯಮದ ಟಿಪ್ಪಣಿ–1ರ ಮೇರೆಗೆ ಆಯೋಗದ ಸಿಬ್ಬಂದಿ ಸದಸ್ಯರನ್ನು ಯಾವ ಪ್ರಾಧಿಕಾರವು ನಿವೃತ್ತಿಗೊಳಿಸಬಹುದೋ ಆ ಪ್ರಾಧಿಕಾರವು ಆಯೋಗವೇ ಆಗಿರತಕ್ಕದ್ದು. ಈ ವಿನಿಯಮಗಳ ಅನುಬಂಧ III ರ ಉಪಬಂಧಗಳು, ಅದರಲ್ಲಿ ತಿಳಿಸಿರುವ ಆಯೋಗದ ಸಿಬ್ಬಂದಿ ಸದಸ್ಯರುಗಳಿಗೆ ಅನ್ವಯವಾಗತಕ್ಕದ್ದು.

(ii) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು, ನೇಮಕ ಪ್ರಾಧಿಕಾರವು ಕರ್ನಾಟಕ ಲೋಕಸೇವಾ ಆಯೋಗದ ಸಿಬ್ಬಂದಿ ಸದಸ್ಯರಿಗೆ ವಿಧಿಸಬಹುದು:

ಪರಂತು, ಕಾರ್ಯದರ್ಶಿಯು, 8ನೇ ನಿಯಮದ (ii), (iii) ಮತ್ತು (iii) (ಎ) ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ದಂಡನೆಗಳಲ್ಲಿ, ಯಾವುದೇ ದಂಡನೆಯನ್ನು ಬಿ ಸಮೂಹದ ಅಧಿಕಾರಿಗೆ ವಿಧಿಸಬಹುದು:

ಮತ್ತೂ ಪರಂತು, 8ನೇ ನಿಯಮದ (v) ರಿಂದ (viii) ರವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ದಂಡನೆಯನ್ನು, ನೇಮಕ ಪ್ರಾಧಿಕಾರಿಗಿಂತ ಕಡಿಮೆ ದರ್ಜೆಯ ಯಾರೇ ಪ್ರಾಧಿಕಾರಿಯು ವಿಧಿಸತಕ್ಕದ್ದಲ್ಲ.

(2) ಆಯೋಗದ ಸಿಬ್ಬಂದಿಯು, ಕರ್ನಾಟಕ ಲೋಕಾಯುಕ್ತ ಅಧಿನಿಯಮ, 1984 (1985ರ ಅಧಿನಿಯಮ ಸಂಖ್ಯೆ 4)ರ ಉಪಬಂಧಗಳ ಮೇರೆಗೆ ರಚಿಸಿದ ಲೋಕಾಯುಕ್ತರ ಅಧಿಕಾರ ವ್ಯಾಪ್ತಿಗೆ ಒಳಪಡತಕ್ಕದ್ದು, ಮತ್ತು ಸದರಿ ಅಧಿನಿಯಮದ ಉಪಬಂಧಗಳು, ಅವುಗಳಲ್ಲಿ 'ಸರ್ಕಾರಕ್ಕೆ' ಮತ್ತು 'ಸರ್ಕಾರಿ ನೌಕರ'ನಿಗೆ ಮಾಡಿದ ಉಲ್ಲೇಖವನ್ನು, ಅನುಕ್ರಮವಾಗಿ 'ಕರ್ನಾಟಕ ಲೋಕಸೇವಾ ಆಯೋಗಕ್ಕೆ' ಮತ್ತು

'ಆಯೋಗದ ಸಿಬ್ಬಂದಿ ಸದಸ್ಯ'ನಿಗೆ ಮಾಡಿದ ಉಲ್ಲೇಖವೆಂದು ಅರ್ಥೈಸತಕ್ಕದೆಂಬ ಮಾರ್ಪಾಡಿನೊಂದಿಗೆ ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಅವರಿಗೆ ಅನ್ವಯವಾಗತಕ್ಕದ್ದು.

[*ವಿನಿಯಮ 16ಎ, 16ಬಿ, 16ಸಿ, 16ಇ, 16ಎಫ್, 16ಜಿ ಇವುಗಳನ್ನು ಬಿಟ್ಟುಬಿಡಲಾಗಿದೆ.]

** 16ಎ. ಕರ್ನಾಟಕ ಸಿವಿಲ್ ಸೇವಾ (ಸೇವೆ ಮತ್ತು ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1974, ಮತ್ತು ಸದರಿ ನಿಯಮಗಳು ಯಾವ ವ್ಯಕ್ತಿಗಳಿಗೆ ಅನ್ವಯವಾಗುತ್ತವೆಯೋ ಆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಸದರಿ ನಿಯಮಗಳ ಅಡಿಯಲ್ಲಿ, ಕಾಲ ಕಾಲಕ್ಕೆ ಹೊರಡಿಸಿದ ಆದೇಶಗಳು, –

(i) ಸದರಿ ನಿಯಮಗಳಲ್ಲಿ 'ಸರ್ಕಾರಿ ನೌಕರ', 'ಸರ್ಕಾರ' ಮತ್ತು 'ಅನುಬಂಧ– II' ಎಂಬ ಪದಗಳಿಗೆ ಮಾಡಿದ ಉಲ್ಲೇಖಗಳನ್ನು, ಅನುಕ್ರಮವಾಗಿ, ಈ ವಿನಿಯಮಗಳಲ್ಲಿ 'ಆಯೋಗದ ಸಿಬ್ಬಂದಿ ಸದಸ್ಯ', 'ಆಯೋಗ' ಮತ್ತು 'ಅನುಬಂಧ–V' ಎಂಬ ಪದಗಳಿಗೆ ಮಾಡಿದ ಉಲ್ಲೇಖ ಎಂದು ಅರ್ಥೈಸತಕ್ಕದೆಂಬ;

(ii) ಸದರಿ ನಿಯಮಗಳ 6ನೇ ನಿಯಮದ (ಎ) ಮತ್ತು (ಬಿ) ಖಂಡಗಳ ಬದಲಾಗಿ ಈ ಮುಂದಿನ ಖಂಡಗಳನ್ನು, ಎಂದರೆ,–

(ಎ) 1974ರ ಜನವರಿ 10ರಂದು ಅಥವಾ ಅದಕ್ಕೂ ಮುಂಚೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಮತ್ತು ಗೊತ್ತುಪಡಿಸಿದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ಅಥವಾ ಉತ್ತೀರ್ಣನಾಗಿರುವನೆಂದು ಭಾವಿಸಲಾದ ಆಯೋಗದ ಸಿಬ್ಬಂದಿ ಸದಸ್ಯನ ಸಂಬಂಧದಲ್ಲಿ, 1974ರ ಜನವರಿ 10ನೇ ದಿನಾಂಕದಿಂದ;

(ಬಿ) 10ನೇ ಜನವರಿ 1974ರ ತರುವಾಯ ಆದರೆ ಗೊತ್ತುಪಡಿಸಿದ ದಿನಾಂಕಕ್ಕಿಂತ ಮುಂಚೆ ಕನ್ನಡ ಭಾಷಾ ಪರೀಕ್ಷೆಯಲ್ಲಿ ಮತ್ತು ಗೊತ್ತುಪಡಿಸಿದ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರುವ ಅಥವಾ ಉತ್ತೀರ್ಣನಾಗಿರುವನೆಂದು ಭಾವಿಸಲಾದ ಆಯೋಗದ ಸಿಬ್ಬಂದಿ ಸದಸ್ಯರ ಸಂಬಂಧದಲ್ಲಿ, ಅಂಥ ಪರೀಕ್ಷೆಗಳಲ್ಲಿ ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣನಾದ ಅಥವಾ ಉತ್ತೀರ್ಣನಾಗಿರುವನೆಂದು ಭಾವಿಸಲಾದ ದಿನಾಂಕದಿಂದ;

(ಸಿ) ಆಯೋಗದ ಸಿಬ್ಬಂದಿ ಸದಸ್ಯನ ಸಂಬಂಧದಲ್ಲಿ ಗೊತ್ತುಪಡಿಸಿದ ದಿನಾಂಕದ ತರುವಾಯ ಸದರಿ ಪರೀಕ್ಷೆಯಲ್ಲಿ ಆತನು ಉತ್ತೀರ್ಣನಾಗಿದ್ದರೆ ಅಂಥ ಪರೀಕ್ಷೆಗಳಲ್ಲಿ ಕೊನೆಯ ಪರೀಕ್ಷೆಯಲ್ಲಿ ಉತ್ತೀರ್ಣನಾದ ದಿನಾಂಕದಿಂದ ಅಥವಾ ಆತನ ನೇಮಕದ ದಿನಾಂಕದಿಂದ ಇವೆರಡರಲ್ಲಿ ಯಾವುದು ನಂತರದ್ದೋ ಆ ದಿನಾಂಕದಿಂದ,

---

* 16ಎ, 16ಬಿ, 16ಸಿ, 16ಇ, 16ಎಫ್, 16ಜಿಗಳನ್ನು ಬಿಟ್ಟುಬಿಡಲಾಗಿದೆ. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಎಸ್‌ಸಿ 99 ದಿನಾಂಕ 30ನೇ ನವೆಂಬರ್ 2001 (3–1–2002ರಂದು ರಾಜ್ಯಪತ್ರದಲ್ಲಿ ಪ್ರಕಟಗೊಂಡಿದೆ) ಇದನ್ನು ನೋಡಿ.

** ಮರು ಸಂಖ್ಯೆ ನೀಡಲಾಗಿದೆ. ಅಧಿಸೂಚನೆ ಸಂಖ್ಯೆ ಡಿಪಿಎಆರ್ 4 ಎಸ್‌ಎಸ್‌ಸಿ 99 ದಿನಾಂಕ 30ನೇ ನವೆಂಬರ್ 2001 (3–1–2002ರಂದು ರಾಜ್ಯಪತ್ರದಲ್ಲಿ ಪ್ರಕಟಗೊಂಡಿದೆ) ಇದನ್ನು ನೋಡಿ.

[ಅಡಿಟಿಪ್ಪಣಿ: 16ಡಿ ವಿನಿಯಮಕ್ಕೆ ಅದರ 16ಎ ವಿನಿಯಮವೆಂದು ಮರು ಸಂಖ್ಯೆ ನೀಡತಕ್ಕದ್ದು ಮತ್ತು ಹಾಗೆ ಮರುಸಂಖ್ಯೆ ನೀಡಲಾದ 16ಎ ವಿನಿಯಮದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ 16ಬಿ]

– ಈ ಖಂಡಗಳನ್ನು ಸೇರಿಸಿರುವುದಾಗಿ ಭಾವಿಸತಕ್ಕದ್ದು ಎಂಬ ಮಾರ್ಪಾಟಿನೊಂದಿಗೆ ಆಯೋಗದ ಕಚೇರಿಯ ಹೊರತಾಗಿ ಇತರ ಕಡೆಗಳಲ್ಲಿ ರಾಜ್ಯದ ಸೇವೆಯಲ್ಲಿರುವ ಸಂವಾದಿ ಹುದ್ದೆಗಳನ್ನು ಧಾರಣ ಮಾಡಿರುವ ಸರ್ಕಾರಿ ನೌಕರರಿಗೆ ಅವು ಅನ್ವಯವಾಗುವಷ್ಟರ ಮಟ್ಟಿಗೆ ಆಯೋಗದ ಸಿಬ್ಬಂದಿಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು;

16ಬಿ. ವೇತನ ಶ್ರೇಣಿಗಳ ಪರಿಷ್ಕರಣೆಗೆ ಅನ್ವಯಿಸುವ ನಿಯಮಗಳು ಮತ್ತು ಕಾಲ ಕಾಲಕ್ಕೆ ತಿದ್ದುಪಡಿಯಾದಂತೆ ಸಂಬಂಧಪಟ್ಟ ಆದೇಶಗಳು ಮತ್ತು ಸಿವಿಲ್ ಸೇವೆಗಳಿಗೆ ನೇಮಕಗೊಂಡ ವ್ಯಕ್ತಿಗಳಿಗೆ ಮತ್ತು ರಾಜ್ಯದ ವ್ಯವಹಾರಗಳಿಗೆ ಸಂಬಂಧಿಸಿದ ಹುದ್ದೆಗಳಿಗೆ ಸಂಬಂಧಿಸಿದಂತೆ ಕಾಲ ಕಾಲಕ್ಕೆ ಹೊರಡಿಸಬಹುದಾದ ಎಲ್ಲಾ ಇತರ ಆದೇಶಗಳ ಉಪಬಂಧಗಳು, ಆಯೋಗದ ಕಚೇರಿಯ ಹೊರತು ಇತರ ಕಡೆಗಳಲ್ಲಿ ರಾಜ್ಯದ ಸೇವೆಗಳಲ್ಲಿ ಸಂವಾದಿ ಹುದ್ದೆಗಳನ್ನು ಧಾರಣ ಮಾಡಿರುವ ಸರ್ಕಾರಿ ನೌಕರರಿಗೆ ಅವು ಅನ್ವಯವಾಗುವ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಅವು ಅನ್ವಯವಾಗುವಷ್ಟರ ಮಟ್ಟಿಗೆ ಆಯೋಗದ ಸಿಬ್ಬಂದಿಗೆ ಯಥೋಚಿತ ಬದಲಾವಣೆಗಳೊಂದಿಗೆ ಅನ್ವಯವಾಗತಕ್ಕದ್ದು.

17. ಆಯೋಗಕ್ಕೆ, –

(ಎ) 12ನೇ ವಿನಿಯಮದ (2)ನೇ ಖಂಡದ ಮೇರೆಗೆ ನಿಯೋಜಿಸಿಕೊಳ್ಳಲು ಅದು ಅಧಿಕಾರ ಹೊಂದಿರುವ ಸಿಬ್ಬಂದಿಯ ನಿಯೋಜನೆಗೆ,

(ಬಿ) ಸಾದಿಲ್ವಾರು ವೆಚ್ಚಗಳನ್ನು ಮತ್ತು ಪರೀಕ್ಷಕರಿಗೆ ಗೌರವಧನ ನೀಡುವುದಕ್ಕೆ, ಮತ್ತು;

(ಸಿ) ಆಯೋಗದ ಸದಸ್ಯರು ಮತ್ತು ಅದರ ಸಿಬ್ಬಂದಿ ಸದಸ್ಯರುಗಳ ಪ್ರಯಾಣ ಭತ್ಯೆಗಳೂ ಸೇರಿದಂತೆ ಅದರ ಕೆಲಸಕ್ಕೆ ಸಂಬಂಧಿಸಿದ ಇತರ ಬಾಬುಗಳಿಗೆ ಅವಶ್ಯವಾಗಬಹುದಾದಂಥ ವೆಚ್ಚಗಳನ್ನು ಮಾಡಲು

– ಅಧಿಕಾರ ನೀಡಬಹುದು ಮತ್ತು ಈ ಮೂಲಕ ಅಧಿಕಾರ ನೀಡಲಾಗಿದೆ:

ಪರಂತು, ವಿಧಾನಮಂಡಲದ ಸದನಗಳ ಮುಂದೆ ಮಂಡಿಸಲಾಗುವ ಯಾವುದೇ ವೆಚ್ಚದ ಅಂದಾಜುಗಳಲ್ಲಿ, ಅಂಥ ವೆಚ್ಚಗಳ ಸಂಬಂಧದಲ್ಲಿ ಸೇರಿಸಬೇಕಾದ ಮೊತ್ತವನ್ನು ರಾಜ್ಯಪಾಲರು ನಿಗದಿಪಡಿಸತಕ್ಕದ್ದು.

## ಭಾಗ VIII – ಸಂಕೀರ್ಣ

18. ಈ ವಿನಿಯಮಗಳ ಮೂಲಕ ಯಾವ ವಿಷಯಕ್ಕೆ ಸಂಬಂಧಿಸಿದಂತೆ ವಿಶೇಷ ಉಪಬಂಧವನ್ನು ಕಲ್ಪಿಸಿಲ್ಲವೋ ಆ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ಆಯೋಗದ ಮತ್ತು ಅದರ ಸಿಬ್ಬಂದಿಯ ಸದಸ್ಯನಾಗಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಯ ಸೇವಾ ಷರತ್ತುಗಳು, ಆಯೋಗದೊಂದಿಗೆ ಸಮಾಲೋಚಿಸಿ, ರಾಜ್ಯಪಾಲರು ನಿರ್ದಿಷ್ಟಪಡಿಸಬಹುದಾದಂಥ ಸರ್ಕಾರಿ ನೌಕರರ ವರ್ಗಗಳಿಗೆ ತತ್ಕಾಲದಲ್ಲಿ ಅನ್ವಯವಾಗುವ ನಿಯಮಗಳಿಗೆ ಮತ್ತು ಆದೇಶಗಳಿಗೆ ಒಳಪಟ್ಟಿರತಕ್ಕದ್ದು.

19. ರಾಜ್ಯ ಪುನಾರಚನೆ ಅಧಿನಿಯಮ, 1956 (1956ರ 37) ರ ಭಾಗ–Xರ ಉಪಬಂಧಗಳಿಗೊಳಪಟ್ಟು, ಈ ವಿನಿಯಮಗಳ ಪ್ರಾರಂಭದ ನಿಕಟಪೂರ್ವದಲ್ಲಿ ಆಯೋಗದ ಸಿಬ್ಬಂದಿ ಸದಸ್ಯರಾಗಿರುವ ಎಲ್ಲಾ ವ್ಯಕ್ತಿಗಳು, ಅವರ ಸೇವಾ ಷರತ್ತುಗಳನ್ನು ರಾಜ್ಯಪಾಲರ ಪೂರ್ವಾನುಮೋದನೆ ಪಡೆದ ಹೊರತು ಅವರಿಗೆ ಅನಾನುಕೂಲವಾಗುವಂತೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲವೆಂಬ ಷರತ್ತಿಗೊಳಪಟ್ಟು ಆಯೋಗದ ಸಿಬ್ಬಂದಿ ಸದಸ್ಯರುಗಳಾಗಿ ಮುಂದುವರಿಯತಕ್ಕದ್ದು.

## ಅನುಬಂಧ–I

### (ವಿನಿಯಮ 12(1)ನ್ನು ನೋಡಿ)

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ವೇತನ ಶ್ರೇಣಿ | ಮಂಜೂರಾದ ಹುದ್ದೆಗಳ ಸಂಖ್ಯೆ |
|---|---|---|---|
| 1. | ಕಾರ್ಯದರ್ಶಿ – ಹಾಗೂ – ಇಲಾಖಾ ಪರೀಕ್ಷೆಗಳ ನಿಯಂತ್ರಕರು | ಭಾ.ಆ.ಸೇ. ವೃಂದದಲ್ಲಿ ಸೇರಿಸಲಾಗಿದೆ | 1 |
| 2. | (+) ಜಂಟಿ ಕಾರ್ಯದರ್ಶಿ | (+) 24450–31800 | 1 |
| 3. | ಕಾನೂನು ಕೋಶದ ಮುಖ್ಯಸ್ಥರು | ಕರಾರು ಮೂಲಕ | 1 |
| 4. | ಉಪ ಕಾರ್ಯದರ್ಶಿ* | 20025–28275 | 4 |
| 5. | ಸಿಸ್ಟಂ ಅನಲಿಸ್ಟ್ | 18150–26925 | 1 |
| 6. | ಸಹಾಯಕ ಕಾರ್ಯದರ್ಶಿ* | 14050–25050 | 15 (ಪ್ರಾದೇಶಿಕ ಕಚೇರಿ–3) |
| 7. | ಸೀನಿಯರ್ ಪ್ರೋಗ್ರಾಮರ್ | 14050–25050 | 1 |
| 8. | ಶಾಖಾಧಿಕಾರಿ* / ಸಾರ್ವಜನಿಕ ಸಂಪರ್ಕಾಧಿಕಾರಿ | 11400–21600 | 25 (ಪ್ರಾದೇಶಿಕ ಕಚೇರಿ–3) |
| 9. | ಜೂನಿಯರ್ ಪ್ರೋಗ್ರಾಮರ್ | 11400–21600 | 3 |
| 10. | ಕನ್ಸೋಲ್ ಆಪರೇಟರ್ | 10800–20025 | 3 |
| 11. | ಹಿರಿಯ ಸಹಾಯಕ* | 10000–18150 | 26 |
| 12. | ಸಹಾಯಕ/ ಲೆಕ್ಕ ಗುಮಾಸ್ತ/ ಸ್ವಾಗತಕಾರ | 8000–14800 | 74 |
| 13. | ಶೀಘ್ರಲಿಪಿಗಾರ | 8000–14800 | 12 |
| 14. | ಡೇಟಾ ಎಂಟ್ರಿ ಆಪರೇಟರ್ಸ್ | 8000–14800 | 12 |
| 15. | ಹಿರಿಯ ಬೆರಳಚ್ಚುಗಾರ | 7275–13350 | 3 |
| 16. | ಕಿರಿಯ ಸಹಾಯಕರು | 5800–10500 | 46 |
| 17. | ಹಿರಿಯ ವಾಹನ ಚಾಲಕರು | 7275–13350 | 1 |
| 18. | ಬೆರಳಚ್ಚುಗಾರರು | 5800–10500 | 11 |
| 19. | ವಾಹನ ಚಾಲಕರು | 5800–10500 | 11 |
| 20. | ಜಮೇದಾರ್ | 5200–8200 | 15 |
| 21. | ದಲಾಯತ್/ ಕಾವಲುಗಾರ/ಹೋಂ ಆರ್ಡರ್ಲಿ/ ಝೂಡಮಾಲಿ | 4800–7275 | 43 |
| | | ಒಟ್ಟು | 309 |

* 1–ಜಂಟಿ ಕಾರ್ಯದರ್ಶಿ, 2–ಉಪ ಕಾರ್ಯದರ್ಶಿ, 7–ಸಹಾಯಕ ಕಾರ್ಯದರ್ಶಿ, 8–ಶಾಖಾಧಿಕಾರಿಗಳು ಮತ್ತು 13 ಹಿರಿಯ ಸಹಾಯಕ, ಈ ಹೆಚ್ಚುವರಿ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ. ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 90 ಸೇಲೋಸೇ 2006, ದಿನಾಂಕ 11–1–2007ನ್ನು ನೋಡಿ.

(+) ಅಧಿಸೂಚನೆ ಸಂಖ್ಯೆ ಡಿಪಿಎಆರ್ 45 ಎಸ್‌ಎಸ್‌ಸಿ 2007, ದಿನಾಂಕ 1–10–2007.

**ಅನುಬಂಧ–1ಎ**

**(ವಿನಿಯಮ 12(1)ನ್ನು ನೋಡಿ)**

| ಹುದ್ದೆಗಳ ಪ್ರವರ್ಗ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|
| ಕಾರ್ಯದರ್ಶಿ – ಹಾಗೂ – ಇಲಾಖಾ ಪರೀಕ್ಷೆಗಳ ನಿಯಂತ್ರಕರು | ಭಾ.ಆ.ಸೇ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಪ್ರತಿನಿಯೋಜನೆಯ ಆಧಾರದ ಮೇಲೆ ನೇಮಕ ಮಾಡುವುದರ ಮೂಲಕ.<br>ಅಂಥ ಪ್ರತಿನಿಯೋಜನೆಯ ಅವಧಿಯು ಮೂರು ವರ್ಷಗಳನ್ನು ಮೀರಬಾರದು | |
| ಜಂಟಿ ಕಾರ್ಯದರ್ಶಿ* | ಉಪಕಾರ್ಯದರ್ಶಿಯ ಕೇಡರಿನಿಂದ ಬಡ್ತಿ ಮೂಲಕ | ಸಹಾಯಕ ಕಾರ್ಯದರ್ಶಿ ಮತ್ತು ಉಪಕಾರ್ಯದರ್ಶಿ ಕೇಡರ್‌ಗಳಲ್ಲಿ ಏಳು ವರ್ಷಗಳಿಗಿಂತ ಕಡಿಮೆಯಲ್ಲದ ಒಟ್ಟು ಸೇವೆಯನ್ನು ಸಲ್ಲಿಸಿರಬೇಕು ಮತ್ತು ಇವುಗಳ ಪೈಕಿ ಉಪಕಾರ್ಯದರ್ಶಿ ಕೇಡರಿನಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಸೇವೆ ಸಲ್ಲಿಸಿರಬೇಕು. |
| ಕಾನೂನು ಕೋಶದ ಮುಖ್ಯಸ್ಥರು | ಕರಾರು ಆಧಾರದ ಮೇಲೆ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಕ ಮಾಡಿಕೊಳ್ಳುವ ಮೂಲಕ | |
| ಉಪ–ಕಾರ್ಯದರ್ಶಿ | ಇಲಾಖಾ ಪರೀಕ್ಷೆಗಳ ಸಹಾಯಕ ಕಾರ್ಯದರ್ಶಿಯೂ ಸೇರಿದಂತೆ ಸಹಾಯಕ ಕಾರ್ಯದರ್ಶಿಯ ಕೇಡರಿನಿಂದ ಬಡ್ತಿ ನೀಡುವ ಮೂಲಕ<br>–ಅಥವಾ–<br>ಮೂರು ವರ್ಷಗಳನ್ನು ಮೀರದ ಅವಧಿಯ ಆಧಾರದ ಮೇಲೆ ಮತ್ತು ಒಬ್ಬರ ಬದಲು ಇನ್ನೊಬ್ಬರನ್ನು ವಿನಿಮಯ ಮಾಡಿಕೊಳ್ಳುವ ಆಧಾರದ ಮೇಲೆ ಕರ್ನಾಟಕ ಆಡಳಿತ ಸೇವಾ ಸಮೂಹ–ಎ ಹಿರಿಯ ಶ್ರೇಣಿಯ ಅಧಿಕಾರಿಯನ್ನು ಅಥವಾ ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಯ ಉಪಕಾರ್ಯದರ್ಶಿಯನ್ನು ಪ್ರತಿನಿಯೋಜಿಸುವುದರ ಮೂಲಕ | **ಬಡ್ತಿಗೆ:**<br>ಸಹಾಯಕ ಕಾರ್ಯದರ್ಶಿ (ಇಲಾಖಾ ಪರೀಕ್ಷೆ) ಸೇರಿದಂತೆ ಸಹಾಯಕ ಕಾರ್ಯದರ್ಶಿ ಕೇಡರಿನಲ್ಲಿ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. |

* ಅಧಿಸೂಚನೆ ಸಂಖ್ಯೆ ಡಿಪಿಎಆರ್ 45 ಎಸ್‌ಎಸ್‌ಸಿ 2007, ದಿನಾಂಕ 1–10–2007ನ್ನು ನೋಡಿ.

| | | |
|---|---|---|
| ಸಿಸ್ಟಂ ಅನಲಿಸ್ಟ್ | ಸೀನಿಯರ್ ಪ್ರೋಗ್ರಾಮರ್ ಕೇಡರಿನಿಂದ ಬಡ್ತಿ ನೀಡುವ ಮೂಲಕ. ಬಡ್ತಿಗೆ ಸೂಕ್ತ ವ್ಯಕ್ತಿ ಲಭ್ಯವಿಲ್ಲದಿದ್ದರೆ, ಕರ್ನಾಟಕ ಸರ್ಕಾರಿ ಗಣಕ ಕೇಂದ್ರದಿಂದ ಸಮಾನ ಕೇಡರಿನ ಅಧಿಕಾರಿಯನ್ನು ಪ್ರತಿನಿಯೋಜಿಸುವುದರ ಮೂಲಕ | **ಬಡ್ತಿಗೆ:**<br>(1) ಗಣಕ ವಿಜ್ಞಾನ ಎಂಜಿನಿಯರಿಂಗ್‌ನಲ್ಲಿ ಸ್ನಾತಕ ಪದವೀದರರಾಗಿರಬೇಕು ಅಥವಾ ಈ ವಿಷಯಗಳಲ್ಲಿ ಉನ್ನತ ಪದವಿಯನ್ನು ಹೊಂದಿರಬೇಕು<br>(2) ಸೀನಿಯರ್ ಪ್ರೋಗ್ರಾಮರ್ ಕೇಡರಿನಲ್ಲಿ ಮೂರು ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆಯನ್ನು ಸಲ್ಲಿಸಿರಬೇಕು. |
| **ಸಹಾಯಕ ಕಾರ್ಯದರ್ಶಿ** (ಇಲಾಖಾ ಪರೀಕ್ಷೆಗಳು) ಸೇರಿದಂತೆ ಸಹಾಯಕ ಕಾರ್ಯದರ್ಶಿ | ಶಾಖಾಧಿಕಾರಿಯ ಕೇಡರಿನಿಂದ ಬಡ್ತಿ ನೀಡುವ ಮೂಲಕ ಅಥವಾ 3 ವರ್ಷಗಳನ್ನು ಮೀರದ ಅವಧಿಯ ಆಧಾರದ ಮೇಲೆ ಅಥವಾ ಒಬ್ಬರ ಬದಲು ಮತ್ತೊಬ್ಬರನ್ನು ವಿನಿಮಯ ಮಾಡಿಕೊಳ್ಳುವ ಆಧಾರದ ಮೇಲೆ ಕರ್ನಾಟಕ ಆಡಳಿತ ಸೇವೆ ಸಮೂಹ–ಎ ಕಿರಿಯ ಶ್ರೇಣಿಯ ಅಧಿಕಾರಿಯನ್ನು ಅಥವಾ ಕರ್ನಾಟಕ ಸರ್ಕಾರದ ಸಚಿವಾಲಯ ಸೇವೆಯ ಅಧೀನ ಕಾರ್ಯದರ್ಶಿಯನ್ನು ಪ್ರತಿನಿಯೋಜಿಸುವುದರ ಮೂಲಕ | **ಬಡ್ತಿಗೆ:**<br>ಶಾಖಾಧಿಕಾರಿ ಕೇಡರಿನಲ್ಲಿ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. ಪರಂತು, ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿಲ್ಲದಿದ್ದರೆ, ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಯನ್ನು ಬಡ್ತಿಗೆ ಪರಿಗಣಿಸಬಹುದು. |
| **ಸೀನಿಯರ್ ಪ್ರೋಗ್ರಾಮರ್** | ಜೂನಿಯರ್ ಪ್ರೋಗ್ರಾಮರ್ ಕೇಡರಿನಿಂದ ಬಡ್ತಿ ನೀಡುವ ಮೂಲಕ. ಬಡ್ತಿಗೆ ಸೂಕ್ತ ಅಧಿಕಾರಿಯು ಲಭ್ಯವಿಲ್ಲದಿದ್ದರೆ, ಆಗ ಕರ್ನಾಟಕ ಸರ್ಕಾರಿ ಗಣಕ ಕೇಂದ್ರದಿಂದ ಸಮಾನ ದರ್ಜೆಯ ಅಧಿಕಾರಿಯನ್ನು ಪ್ರತಿನಿಯೋಜಿಸುವ ಮೂಲಕ | **ಬಡ್ತಿಗೆ:**<br>(1) ಗಣಕ (ಕಂಪ್ಯೂಟರ್) ವಿಜ್ಞಾನ ಎಂಜಿನಿಯರಿಂಗ್‌ನಲ್ಲಿ ಸ್ನಾತಕ ಪದವೀಧರರಾಗಿರಬೇಕು ಅಥವಾ ಗಣಕ ವಿಜ್ಞಾನದಲ್ಲಿ ಪದವಿ ಅಥವಾ ಆ ವಿಷಯಗಳಲ್ಲಿ ಉನ್ನತ ಪದವಿ ಹೊಂದಿರಬೇಕು.<br>(2) ಜೂನಿಯರ್ ಪ್ರೋಗ್ರಾಮರ್ ಕೇಡರಿನಲ್ಲಿ ಮೂರು ವರ್ಷಗಳಿಗಿಂತ ಕಡಿಮೆಯಲ್ಲದ ಸೇವೆಯನ್ನು ಸಲ್ಲಿಸಿರಬೇಕು. |

| | | |
|---|---|---|
| ಅಧ್ಯಕ್ಷರ ಆಪ್ತ ಕಾರ್ಯದರ್ಶಿಯೂ ಸೇರಿದಂತೆ ಶಾಖಾಧಿಕಾರಿ | ಹಿರಿಯ ಸಹಾಯಕರ ಕೇಡರಿನಿಂದ ಬಡ್ತಿ ನೀಡುವ ಮೂಲಕ ಅಥವಾ 3 ವರ್ಷಗಳನ್ನು ಮೀರದ ಅವಧಿಯ ಆಧಾರದ ಮೇಲೆ ಮತ್ತು ಒಬ್ಬರ ಬದಲು ಮತ್ತೊಬ್ಬರನ್ನು ವಿನಿಯಮ ಮಾಡಿಕೊಳ್ಳುವ ಆಧಾರದ ಮೇಲೆ ಕರ್ನಾಟಕ ಸರ್ಕಾರಿ ಸಚಿವಾಲಯದ ಶಾಖಾಧಿಕಾರಿಯನ್ನು ಅಥವಾ ಕರ್ನಾಟಕ ಆಡಳಿತ ಸೇವೆ ಸಮೂಹ–ಬಿ ಅಧಿಕಾರಿಯನ್ನು ಪ್ರತಿನಿಯೋಜನೆ ಮಾಡುವ ಮೂಲಕ | **<u>ಬಡ್ತಿಗೆ:</u>**<br>ಹಿರಿಯ ಸಹಾಯಕರ ಕೇಡರಿನಲ್ಲಿ ಸತತ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. ಪರಂತು, ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಗಳು ಲಭ್ಯವಿಲ್ಲದಿದ್ದರೆ, ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಯನ್ನು ಬಡ್ತಿಗೆ ಪರಿಗಣಿಸಬಹುದು. |
| ಜೂನಿಯರ್ ಪ್ರೋಗ್ರಾಮರ್ | ಶೇ. 50ರಷ್ಟು ನೇರ ನೇಮಕಾತಿ ಮೂಲಕ ಮತ್ತು ಕನ್ಸೋಲ್ ಆಪರೇಟರುಗಳ ಕೇಡರಿನಿಂದ ಶೇಕಡಾ ಐವತ್ತರಷ್ಟು ಬಡ್ತಿ ನೀಡುವ ಮೂಲಕ. ಬಡ್ತಿಗೆ ಸೂಕ್ತ ಅಭ್ಯರ್ಥಿಯು ಲಭ್ಯವಿರದಿದ್ದರೆ, ಆಗ ನೇರ ನೇಮಕಾತಿ ಮೂಲಕ. | **<u>ನೇರ ನೇಮಕಾತಿ:</u>**<br>1) ಗಣಕ ವಿಜ್ಞಾನ ಇಂಜಿನಿಯರಿಂಗ್‌ನಲ್ಲಿ ಸ್ನಾತಕ ಪದವೀಧರರಾಗಿರಬೇಕು ಅಥವಾ ಗಣಕ ವಿಜ್ಞಾನದಲ್ಲಿ ಸ್ನಾತಕ ಪದವಿ ಅಥವಾ ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಗಣಕ ವಿಜ್ಞಾನದಲ್ಲಿ ತತ್ಸಮಾನ ಅಥವಾ ಉನ್ನತ ಪದವಿ ಹೊಂದಿರಬೇಕು. ಮೇಲಿನ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳು, ಯಾವುದೇ ಸಮೂಹದಲ್ಲಿ ಲಭ್ಯವಿಲ್ಲದಿದ್ದರೆ, ಆಗ, ಭೌತಶಾಸ್ತ್ರ, ಗಣಿತಶಾಸ್ತ್ರ ಮತ್ತು ವಾಣಿಜ್ಯ ಶಾಸ್ತ್ರದಲ್ಲಿ ದ್ವಿತೀಯ ದರ್ಜೆ ಪದವಿ ಪಡೆದಿರುವ ಅಭ್ಯರ್ಥಿಗಳನ್ನು ಪರಿಗಣಿಸಲಾಗುವುದು.<br>(2) ಕರ್ನಾಟಕ ಸರ್ಕಾರಿ ಗಣಕ ಕೇಂದ್ರ ನಿರ್ದೇಶಕರೊಂದಿಗೆ / ಗಣಕ ಯಂತ್ರ ಸರಬರಾಜುದಾರರೊಂದಿಗೆ ಸಮಾಲೋಚಿಸಿ, ಕರ್ನಾಟಕ ಲೋಕಸೇವಾ ಆಯೋಗವು ಪ್ರೋಗ್ರಾಮರ್‌ಗಳಿಗಾಗಿ ನಡೆಸುವ ಲಿಖಿತ ಅರ್ಹತಾ ಪರೀಕ್ಷೆಯಲ್ಲಿ ಬಿ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು. |

| | | |
|---|---|---|
| | | (3) ಕರ್ನಾಟಕ ಸರ್ಕಾರದ ಗಣಕ ಕೇಂದ್ರವು ಪ್ರಮಾಣೀಕರಿಸಿರುವಂತೆ ಖ್ಯಾತ ಮತ್ತು ಸುಸ್ಥಾಪಿತ ಗಣಕ ಯಂತ್ರ ಫರ್ಮ್‌ನಲ್ಲಿ/ಗಣಕ ಯಂತ್ರ ಸ್ಥಾಪನೆಯಲ್ಲಿ ಪ್ರೋಗ್ರಾಮಿಂಗ್ ಕೆಲಸದಲ್ಲಿ ಒಂದು ವರ್ಷಕ್ಕಿಂತ ಕಡಿಮೆ ಇಲ್ಲದ ಅನುಭವ ಹೊಂದಿರಬೇಕು.<br>ವಯಸ್ಸು: ಮೂವತ್ತೈದು ವರ್ಷ ವಯಸ್ಸನ್ನು ಮೀರಿರಬಾರದು.<br><br>**ಬಡ್ತಿಗೆ:**<br>(1) ಪದವೀಧರರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಪಡೆದಿರಬೇಕು.<br>(2) ಕರ್ನಾಟಕ ಸರ್ಕಾರಿ ಗಣಕ ಕೇಂದ್ರದ ನಿರ್ದೇಶಕರೊಂದಿಗೆ ಸಮಾಲೋಚಿಸಿ ಕರ್ನಾಟಕ ಲೋಕಸೇವಾ ಆಯೋಗವು ಪ್ರೋಗ್ರಾಮರ್‌ಗಳಿಗಾಗಿ ನಡೆಸುವ ಲಿಖಿತ ಸಾಮರ್ಥ್ಯ ಪರೀಕ್ಷೆಯಲ್ಲಿ 'ಬಿ' ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.<br><br>ಕನ್ಸೋಲ್ ಆಪರೇಟರ್ ಕೇಡರ್‌ನಲ್ಲಿ 5 ವರ್ಷಗಳಿಗಿಂತ ಕಡಿಮೆ ಇಲ್ಲದ ಸೇವೆ ಸಲ್ಲಿಸಿರತಕ್ಕದ್ದು.<br><br>**ಸಾಮರ್ಥ್ಯ ಪರೀಕ್ಷೆ:**<br>ಈ ಪರೀಕ್ಷೆಯಲ್ಲಿ ಮೂರು ಭಾಗಗಳಿವೆ.<br>(ಎ) ಕೊಟ್ಟಿರುವ ವರ್ಣಮಾಲೆಯ ಮಾದರಿಯನ್ನು ಅಭ್ಯಸಿಸಲು ಮತ್ತು ಆ ವರ್ಣಮಾಲೆಯ ಮಾದರಿಯಿಂದ ಸಂಬಂಧಪಡದವುಗಳನ್ನು ತೆಗೆದುಹಾಕಲು ವರ್ಣಮಾಲೆಯ ಅರಿವು.<br>(ಬಿ) ಕೊಟ್ಟಿರುವ ಚಿತ್ರಗಳ ಸೆಟ್‌ನಲ್ಲಿ ವ್ಯತ್ಯಾಸದ ನಮೂನೆಯನ್ನು ಅಭ್ಯಸಿಸಲು ಮತ್ತು ಆ ನಮೂನೆಯಿಂದ ಸಂಬಂಧಪಡದವುಗಳನ್ನು ತೆಗೆದುಹಾಕಲು ಚಿತ್ರದ ಅರಿವು.<br>(ಸಿ) ಅಂಕಗಣಿತ |

| | | |
|---|---|---|
| ಕನ್ಸೋಲ್ ಆಪರೇಟರ್<br><br>**ಸೂಚನೆ:** ಕನ್ಸೋಲ್ ಆಪರೇಟರ್‌ನ ಹುದ್ದೆಗೆ ಬಡ್ತಿ ಹೊಂದಲು ಇಚ್ಛಿಸುವ ಸಿ ಸಮೂಹದ ನೌಕರನು ರದ್ದುಗೊಳಿಸಲಾಗದ ಆಯ್ಕೆಯನ್ನು ಚಲಾಯಿಸತಕ್ಕದ್ದು | ಶೇ $33^{1/3}$ ರಷ್ಟು ನೇರ ನೇಮಕಾತಿ ಮೂಲಕ ಮತ್ತು $66^{2/3}$ ರಷ್ಟು :–<br>(i) ಡೇಟಾ ಎಂಟ್ರಿ ಆಪರೇಟರ್ ಕೇಡರ್‌ನಿಂದ;<br>(ii) ಸದರಿ ಕೇಡರ್‌ನಲ್ಲಿ ಬಡ್ತಿಗೆ ಸೂಕ್ತ ವ್ಯಕ್ತಿಯು ಲಭ್ಯವಿಲ್ಲದಿದ್ದರೆ, ಸಮೂಹ 'ಸಿ' ಪ್ರವರ್ಗದ ಯಾವುದೇ ಕೇಡರ್‌ನಿಂದ – ಉನ್ನತ ವೇತನ ಶ್ರೇಣಿಯನ್ನು ಹೊಂದಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯನ್ನು ಹೊಂದಿರುವ ವ್ಯಕ್ತಿಗಿಂತ ಹಿರಿಯನೆಂದು ಪರಿಗಣಿಸಿ ಅವರೊಳಗೆ ಜೇಷ್ಠತೆಯನ್ನು ನಿರ್ಧರಿಸಿ. ಪರಸ್ಪರ ಸೇವಾ *ಜ್ಯೇಷ್ಠತೆಯನ್ನು ಉಳಿಸಿಕೊಂಡು – ಬಡ್ತಿ ನೀಡುವ ಮೂಲಕ.<br>ಬಡ್ತಿಗೆ ಸೂಕ್ತ ಅಭ್ಯರ್ಥಿಯು ಲಭ್ಯವಿಲ್ಲದಿದ್ದರೆ ಆಗ ನೇರ ನೇಮಕಾತಿ ಮೂಲಕ. | **ನೇರ ನೇಮಕಾತಿಗೆ:–**<br>(1) ಪದವೀಧರರಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.<br><br>(2) ಕರ್ನಾಟಕ ಸರ್ಕಾರದ ಗಣಕ ಯಂತ್ರ ಕೇಂದ್ರದ ನಿರ್ದೇಶಕರೊಂದಿಗೆ, ಮತ್ತು / ಅಥವಾ ಗಣಕ ಯಂತ್ರ ಸರಬರಾಜುದಾರರೊಂದಿಗೆ ಸಮಾಲೋಚಿಸಿ ಕರ್ನಾಟಕ ಲೋಕಸೇವಾ ಆಯೋಗವು ಕನ್ಸೋಲ್ ಆಪರೇಟರ್‌ಗಳಿಗಾಗಿ ನಡೆಸುವ ಲಿಖಿತ ಸಾಮರ್ಥ್ಯ ಪರೀಕ್ಷೆಯಲ್ಲಿ ಬಿ ದರ್ಜೆಯಲ್ಲಿ ಉತ್ತೀರ್ಣನಾಗಿರಬೇಕು.<br>(3) ಯಾವುದೇ ಗಣಕಯಂತ್ರ ಸ್ಥಾಪನೆಯಲ್ಲಿ ಕಂಪ್ಯೂಟರ್ ಕನ್ಸೋಲ್ ಕುರಿತಂತೆ ಎರಡು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಕಾರ್ಯನಿರ್ವಹಿಸಿರಬೇಕು.<br>**ವಯಸ್ಸು:** ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977 ರಂತೆ.<br><br>**ಸಾಮರ್ಥ್ಯ ಪರೀಕ್ಷೆ:**<br>ಇದು ಎರಡು ಭಾಗಗಳನ್ನು ಹೊಂದಿರುತ್ತದೆ, ಎಂದರೆ, "ಚಿತ್ರದ ಅರಿವು" (ಪಿಕ್ಚರ್ ಕಾಂಪ್ರಹೆನ್‌ಷನ್) ಮತ್ತು ಅಂಕಗಣಿತ, ಇವುಗಳು ಜೂನಿಯರ್ ಪ್ರೋಗ್ರಾಮರ್/ ಸೀನಿಯರ್ ಕನ್ಸೋಲ್ ಆಪರೇಟರ್‌ಗಳ ಹುದ್ದೆಗಳಿಗೆ ಗೊತ್ತುಪಡಿಸಿರುವಂಥವುಗಳೇ ಆಗಿರುತ್ತವೆ. ಆದರೆ ಇವು ಅದಕ್ಕಿಂತ ಸರಳವಾಗಿರುತ್ತವೆ. ಕಣ್ಣಿನಿಂದ ನೋಡಿ ಗ್ರಹಿಸುವ ಸಾಮರ್ಥ್ಯದ ಪರೀಕ್ಷೆಯು ಕಲ್ಪನಾ ಸಾಮರ್ಥ್ಯಕ್ಕಿಂತ ಹೆಚ್ಚಿನದ್ದಾಗಿರುತ್ತದೆ.<br><br>**ಬಡ್ತಿಗೆ:** (1) ಕರ್ನಾಟಕ ಸರ್ಕಾರದ ಗಣಕ ಯಂತ್ರ ಕೇಂದ್ರದ ನಿರ್ದೇಶಕರೊಂದಿಗೆ ಸಮಾಲೋಚಿಸಿ ಕರ್ನಾಟಕ ಲೋಕಸೇವಾ ಆಯೋಗವು ಕನ್ಸೋಲ್ ಆಪರೇಟರ್‌ಗಳಿಗಾಗಿ ನಡೆಸುವ ಲಿಖಿತ–ಸಾಮರ್ಥ್ಯ ಪರೀಕ್ಷೆಯಲ್ಲಿ ಬಿ ದರ್ಜೆಯಲ್ಲಿ ಉತ್ತೀರ್ಣನಾಗಿರಬೇಕು. |

* ನೋಡಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 9 ಎಸ್‌ಎಸ್‌ಸಿ 94 ದಿನಾಂಕ 6–3–1996.

| | | |
|---|---|---|
| | | (2) ಡೇಟಾ ಎಂಟ್ರಿ ಆಪರೇಟರ್‌ಗಳಾಗಿ 3 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಅವಧಿ ಕಾರ್ಯನಿರ್ವಹಿಸಿರಬೇಕು.<br>(3) ಹದಿನಾರು ವಾರಗಳಿಗೆ ಕಡಿಮೆ ಇಲ್ಲದಂತೆ ಇಡಿಪಿ ತರಬೇತಿಯನ್ನು ಪಡೆದಿರಬೇಕು ಮತ್ತು ಸಿ ಸಮೂಹದ ಯಾವುದೇ ಪ್ರವರ್ಗದಲ್ಲಿ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಸೇವೆಯನ್ನು ಸಲ್ಲಿಸಿರಬೇಕು. |
| ಹಿರಿಯ ಸಹಾಯಕ | ಸಂಬಂಧಪಟ್ಟ ಕೇಡರುಗಳಲ್ಲಿನ ಸೇವಾವಧಿಯ ಆಧಾರದ ಮೇಲೆ ಜೇಷ್ಠತೆಯನ್ನು ನಿರ್ಧರಿಸಿ ಆ ಸಾಮಾನ್ಯ ಜೇಷ್ಠೆಯ ಆಧಾರದ ಮೇಲೆ ಸಹಾಯಕ, ಅಕೌಂಟೆಂಟ್ ಮತ್ತು ಸ್ವಾಗತಕಾರ ಕೇಡರುಗಳಿಂದ ಮತ್ತು 4:1 ರ ಅನುಪಾತದಲ್ಲಿ ಶೀಘ್ರಲಿಪಿಗಾರ ಕೇಡರಿನಿಂದ ಬಡ್ತಿ ನೀಡುವ ಮೂಲಕ. ಪ್ರತಿ ಐದನೇ ಹುದ್ದೆಯನ್ನು ಶೀಘ್ರಲಿಪಿಗಾರರಿಗೆ ಬಡ್ತಿ ನೀಡಿ ತುಂಬಬೇಕು. | 2ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ಕೇಡರ್‌ನಲ್ಲಿ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು.<br><br>ಪರಂತು, ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿದ ಅಧಿಕಾರಿಯು ಲಭ್ಯವಿಲ್ಲದಿದ್ದಾಗ ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಯನ್ನು ಬಡ್ತಿಗೆ ಪರಿಗಣಿಸಬಹುದು. |
| ಸಹಾಯಕ (ಅಕೌಂಟೆಂಟ್ ಮತ್ತು ಸ್ವಾಗತಕಾರ ಸೇರಿದಂತೆ) | ಶೇ. 50 ರಷ್ಟು ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978ರ ಅನುಸಾರವಾಗಿ ನೇರ ನೇಮಕಾತಿ ಮೂಲಕ<br><br>ಶೇಕಡಾ 50 ರಷ್ಟು ಕಿರಿಯ ಸಹಾಯಕರ ಕೇಡರ್‌ನಿಂದ ಬಡ್ತಿ ನೀಡುವ ಮೂಲಕ | **ಬಡ್ತಿಗೆ:**<br>ಕಿರಿಯ ಸಹಾಯಕರ ಕೇಡರ್‌ನಲ್ಲಿ ಐದು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು.<br><br>ಪರಂತು, ಕನಿಷ್ಠ ಐದು ವರ್ಷಗಳ ಸೇವೆಯನ್ನು ಸಲ್ಲಿಸಿದ ಅಧಿಕಾರಿಯು ಲಭ್ಯವಿಲ್ಲದಿದ್ದರೆ, ಮೂರು ವರ್ಷಗಳ ಸೇವೆಯನ್ನು ಸಲ್ಲಿಸಿರುವ ಅಧಿಕಾರಿಯನ್ನು ಬಡ್ತಿಗೆ ಪರಿಗಣಿಸಬಹುದು. |
| ಡೇಟಾ ಎಂಟ್ರಿ ಅಪರೇಟರ್ | ನೇರ ನೇಮಕಾತಿ ಮೂಲಕ ಅಥವಾ ಕರ್ನಾಟಕ ಸರ್ಕಾರದ ಗಣಕ ಯಂತ್ರ ಕೇಂದ್ರವೂ ಸೇರಿದಂತೆ ರಾಜ್ಯ ಸಿವಿಲ್ ಸೇವೆಗಳಿಂದ ತತ್ಸಮಾನ ದರ್ಜೆಯಲ್ಲಿರುವ ನೌಕರರನ್ನು ಪ್ರತಿನಿಯೋಜನೆ ಮಾಡಿಕೊಳ್ಳುವ ಮೂಲಕ. | **ನೇರ ನೇಮಕಾತಿಗೆ:**<br>(1) ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣನಾಗಿರಬೇಕು.<br>(2) ಕರ್ನಾಟಕ ಸರ್ಕಾರದ ಗಣಕ ಯಂತ್ರ ಕೇಂದ್ರದ ನಿರ್ದೇಶಕರೊಂದಿಗೆ ಮತ್ತು / ಅಥವಾ ಗಣಕಯಂತ್ರ ಸರಬರಾಜುದಾರರೊಂದಿಗೆ ಸಮಾಲೋಚಿಸಿ ಕರ್ನಾಟಕ ಲೋಕಸೇವಾ ಆಯೋಗವು ಕೀ |

| | | |
|---|---|---|
| | | ಪಂಚ್/ ವೆರಿಫೈಯರ್ / ಆಪರೇಟರುಗಳಿಗಾಗಿ ನಡೆಸುವ ಲಿಖಿತ ಸಾಮರ್ಥ್ಯ ಪರೀಕ್ಷೆಯಲ್ಲಿ ಬಿ ದರ್ಜೆಯಲ್ಲಿ ಉತ್ತೀರ್ಣರಾಗಿರಬೇಕು.<br>ಗಣಕ ಯಂತ್ರ ಸ್ಥಾಪನೆಯಲ್ಲಿ ಕನಿಷ್ಠ ಒಂದು ವರ್ಷ ಗಣಕಯಂತ್ರ ಪ್ರೊಗ್ರಾಮಿಂಗ್‌ನಲ್ಲಿ ಯಶ್ವಸಿಯಾಗಿ ಅಧ್ಯಯನ ಮಾಡಿರುವ ಅಭ್ಯರ್ಥಿಗಳಿಗೆ ಮತ್ತು / ಅಥವಾ ಕರ್ನಾಟಕ ಸರ್ಕಾರದ ಗಣಕಯಂತ್ರ ಘಟಕದಲ್ಲಿ ಮೂರು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಅವಧಿ ಕಾರ್ಯನಿರ್ವಹಿಸಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. |
| ಶೀಘ್ರಲಿಪಿಗಾರ | ಶೇಕಡಾ 40 ರಷ್ಟು ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1983 ರ ಅನುಸಾರವಾಗಿ ನೇರ ನೇಮಕಾತಿ ಮೂಲಕ<br>ಶೇಕಡಾ 60 ರಷ್ಟು ಹಿರಿಯ ಬೆರಳಚ್ಚುಗಾರರ ಕೇಡರ್‌ನಿಂದ ಬಡ್ತಿ ನೀಡುವ ಮೂಲಕ<br><br>ಬಡ್ತಿಗೆ ಸೂಕ್ತ ಹಿರಿಯ ಬೆರಳಚ್ಚುಗಾರರು ಲಭ್ಯವಿಲ್ಲದಿದ್ದಾಗ ಬೆರಳಚ್ಚುಗಾರರಿಗೆ ಬಡ್ತಿ ನೀಡುವ ಮೂಲಕ.<br>ಬಡ್ತಿಗೆ ಸೂಕ್ತ ಬೆರಳಚ್ಚುಗಾರರು ಲಭ್ಯವಿಲ್ಲದಿದ್ದರೆ, ಕಿರಿಯ ಸಹಾಯಕನಿಗೆ ಬಡ್ತಿ ನೀಡುವ ಮೂಲಕ. ಬಡ್ತಿಗೆ ಯಾವ ಸೂಕ್ತ ವ್ಯಕ್ತಿಯೂ ಲಭ್ಯವಿಲ್ಲದಿದ್ದರೆ, ನೇರ ನೇಮಕಾತಿ ಮೂಲಕ. | **ಬಡ್ತಿಗೆ:**<br>ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆಯಲ್ಲಿ ಮತ್ತು ಕನ್ನಡ ಹಿರಿಯ ಶೀಘ್ರಲಿಪಿ ಪರೀಕ್ಷೆಯಲ್ಲಿ ಅಥವಾ ಅವುಗಳಿಗೆ ತತ್ಸಮಾನವಾಗಿರುವ ಪರೀಕ್ಷೆಯಲ್ಲಿ ಉತ್ತೀರ್ಣನಾಗಿರಬೇಕು. |
| ಹಿರಿಯ ಬೆರಳಚ್ಚುಗಾರ | ಬೆರಳಚ್ಚುಗಾರನಿಗೆ ಬಡ್ತಿ ನೀಡುವ ಮೂಲಕ | ಬೆರಳಚ್ಚುಗಾರ ಕೇಡರ್‌ನಲ್ಲಿ 10 ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. |

| | | |
|---|---|---|
| ಹಿರಿಯ ವಾಹನ ಚಾಲಕ | ವಾಹನ ಚಾಲಕನಿಗೆ ಬಡ್ತಿ ನೀಡುವ ಮೂಲಕ | ವಾಹನ ಚಾಲಕ ಕೇಡರ್‌ನಲ್ಲಿ 10 ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು |
| ಕಿರಿಯ ಸಹಾಯಕ | ಶೇಕಡಾ 75 ರಷ್ಟು ಕರ್ನಾಟಕ ಸಿವಿಲ್ ಸೇವಾ (ಲಿಪಿಕ ಹುದ್ದೆಗಳಿಗೆ ನೇಮಕಾತಿ) ನಿಯಮಗಳು, 1978ರ ಅನುಸಾರವಾಗಿ ನೇರ ನೇಮಕಾತಿ ಮೂಲಕ.<br><br>ಶೇಕಡಾ 25 ರಷ್ಟು* – ವಾಹನ ಚಾಲಕರ ಕೇಡರ್‌ನಲ್ಲಿರುವ ವ್ಯಕ್ತಿಗಳನ್ನು ವರ್ಗಾವಣೆ ಮಾಡುವ ಮೂಲಕ. ಮತ್ತು ವರ್ಗಾವಣೆಗೆ ಸೂಕ್ತ ವ್ಯಕ್ತಿಯು ಲಭ್ಯವಿಲ್ಲದಿದ್ದರೆ ಜೇಷ್ಠತೆಯ ಆಧಾರದ ಮೇಲೆ ಸಮೂಹ 'ಡಿ' ಸೇವೆಯ ಕೇಡರ್‌ನಿಂದ ಉನ್ನತ ವೇತನ ಶ್ರೇಣಿಯ ಹುದ್ದೆಯನ್ನು ಹೊಂದಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯ ಹುದ್ದೆಯನ್ನು ಹೊಂದಿರುವ ವ್ಯಕ್ತಿಗಿಂತ ಹಿರಿಯನೆಂದು ಪರಿಗಣಿಸಿ ಸೇವಾ ಜೇಷ್ಠತೆಯನ್ನು ನಿರ್ಧರಿಸಿ.<br>ಒಂದೇ ವೇತನ ಶ್ರೇಣಿ ಹೊಂದಿರುವ ವ್ಯಕ್ತಿಗಳ ನಡುವೆ ಪರಸ್ಪರ ಜೇಷ್ಠತೆಯನ್ನು ಸಂಬಂಧಪಟ್ಟ ಕೇಡರಿನಲ್ಲಿ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸಿ ಮತ್ತು ಕೇಡರಿನಲ್ಲಿನ ವ್ಯಕ್ತಿಗಳ ಪರಸ್ಪರ ಸೇವಾ ಜೇಷ್ಠತೆಯನ್ನು ಉಳಿಸಿಕೊಂಡು ಬಡ್ತಿ ನೀಡುವ ಮೂಲಕ. | **ಬಡ್ತಿಗೆ:**<br>(1) ಎಸ್‌ಎಸ್‌ಎಲ್‌ಸಿಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನವಾದ ವಿದ್ಯಾರ್ಹತೆ ಹೊಂದಿರಬೇಕು.<br><br>(2) ವಾಹನ ಚಾಲಕರ ಕೇಡರಿನಲ್ಲಿ ಮತ್ತು/ ಅಥವಾ ಸಮೂಹ 'ಡಿ' ಸೇವೆಯ ಯಾವುದೇ ಕೇಡರ್‌ನಲ್ಲಿ ಕನಿಷ್ಠ ಏಳು ವರ್ಷಗಳ ಸೇವೆಯನ್ನು ಸಲ್ಲಿಸಿರಬೇಕು. |

* ಅಧಿಸೂಚನೆ ಸಂಖ್ಯೆ ಡಿಪಿಎಆರ್ 10 ಎಸ್‌ಎಸ್‌ಸಿ 99, ದಿನಾಂಕ 15–9–1999ರ ಮೂಲಕ ಪ್ರತಿಯೋಜಿಸಲಾಗಿದೆ.

| | | |
|---|---|---|
| **ಬೆರಳಚ್ಚುಗಾರ** | ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗೆ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ ನೇರ ನೇಮಕಾತಿ ಮೂಲಕ | |
| **ವಾಹನ ಚಾಲಕ** | ಇತರ 'ಡಿ' ಸಮೂಹದ ಸಿಬ್ಬಂದಿಯ ಕೇಡರ್‌ನಿಂದ ಬಡ್ತಿ ನೀಡುವ ಮೂಲಕ<br>ಅಥವಾ<br>ಇತರ ಇಲಾಖೆಗಳಿಂದ ಪ್ರತಿನಿಯೋಜನೆ ಮಾಡಿಕೊಳ್ಳುವ ಮೂಲಕ ಅಥವಾ ನೇರ ನೇಮಕಾತಿ ಮೂಲಕ. | ಬಡ್ತಿಗೆ ಮತ್ತು ನೇರ ನೇಮಕಾತಿಗೆ: ಸಕ್ಷಮ ಪ್ರಾಧಿಕಾರವು ನೀಡಿರುವ ಸಿಂಧುವಾದ ಲಘು ಮೋಟಾರು ವಾಹನ ಚಾಲನಾ ಲೈಸೆನ್ಸನ್ನು ಹೊಂದಿರಬೇಕು. |
| ಜಮೇದಾರ್/ ದಫೇದಾರ್/ ಮುಚ್ಚಿ | ದಲಾಯತ, ಕಾವಲುಗಾರ ಮತ್ತು ಝಾಡಮಾಲಿ ಕೇಡರಿನಿಂದ ಸಂಬಂಧಪಟ್ಟ ಕೇಡರುಗಳಲ್ಲಿನ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸುವ ಸಂಯುಕ್ತ ಸೇವಾ ಜೇಷ್ಠತೆಯ ಆಧಾರದ ಮೇಲೆ, ಕೇಡರಿನಲ್ಲಿ ಪರಸ್ಪರ ಸೇವಾ ಜೇಷ್ಠತೆಯನ್ನು ಉಳಿಸಿಕೊಂಡು ಬಡ್ತಿ ನೀಡುವ ಮೂಲಕ. | |
| ದಲಾಯತ್ | ನೇರ ನೇಮಕಾತಿ ಮೂಲಕ | IV ನೇ ತರಗತಿಯಲ್ಲಿ ಉತ್ತೀರ್ಣನಾಗಿರಬೇಕು. |
| ಕಾವಲುಗಾರ / ಝಾಡಮಾಲಿ ಮತ್ತು ಹೋಂ ಆರ್ಡರ್ಲಿ | ನೇರ ನೇಮಕಾತಿ ಮೂಲಕ | |

## ಅನುಬಂಧ–II

**(ವಿನಿಯಮ–12 (2)ನ್ನು ನೋಡಿ)**

(i) ವಿನಿಯಮ 12 (2) (ಬಿ) ಮೇರೆಗೆ ನಿಯೋಜಿಸಿಕೊಂಡಿರುವ ಯಾರೇ ತಾತ್ಕಾಲಿಕ ಸಿಬ್ಬಂದಿಯು ಅನುಬಂಧ–1ರಲ್ಲಿ ತಿಳಿಸಿರುವ ಬಗೆಯವರಾಗಿರತಕ್ಕದ್ದಲ್ಲ.

(ii) ಆಯೋಗವು, ರಾಜ್ಯಪಾಲರ ಮಂಜೂರಾತಿಯನ್ನು ನಿರೀಕ್ಷಿಸಿ ಮೂರು ತಿಂಗಳುಗಳಿಗೆ ಮೀರದ ಅವಧಿಗೆ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು. ಆದರೆ, ರಾಜ್ಯಪಾಲರ ಪೂರ್ವಾನುಮೋದನೆ ಪಡೆಯದೆ ಆಯೋಗವು ಮೂರು ತಿಂಗಳುಗಳಿಗೆ ಮೀರಿ ಅವರನ್ನು ಹಾಗೆ ಉಳಿಸಿಕೊಳ್ಳತಕ್ಕದ್ದಲ್ಲ. ಕ್ಯಾಲೆಂಡರ್ ವರ್ಷದ ಅವಧಿಯಲ್ಲಿ ಮಾಡಿಕೊಂಡ ಅಂಥ ಎಲ್ಲಾ ತಾತ್ಕಾಲಿಕ ನೇಮಕಗಳ ಪಟ್ಟಿಯನ್ನು ಕ್ಯಾಲೆಂಡರ್ ವರ್ಷವು ಮುಗಿದ ತರುವಾಯ ಒಂದು ತಿಂಗಳೊಳಗೆ ಸ್ಥಿರೀಕರಣಕ್ಕೆ ರಾಜ್ಯಪಾಲರಿಗೆ ಸಲ್ಲಿಸತಕ್ಕದ್ದು.

(iii) ಅಂಥ ಯಾರೇ ಸಿಬ್ಬಂದಿಯನ್ನು ಅನುಬಂಧ–I ರ ಅಂಕಣ (2)ರಲ್ಲಿ ನಮೂದಿಸಿದ ಬಗೆಯ ಸಂವಾದಿ ಹುದ್ದೆಗೆ ಆ ಅನುಬಂಧದ (4)ನೇ ಅಂಕಣದಲ್ಲಿ ಗೊತ್ತುಪಡಿಸಿರುವ ಕಾಲಿಕ ವೇತನ ಶ್ರೇಣಿಯ ಅತ್ಯಂತ ಕಡಿಮೆ ಹಂತವನ್ನು ಮೀರಿದ ವೇತನ ಶ್ರೇಣಿಯಲ್ಲಿ ನಿಯೋಜಿಸಿಕೊಳ್ಳತಕ್ಕದ್ದಲ್ಲ.

(iv) ವರ್ಷದ ಅವಧಿಯಲ್ಲಿ ಮಂಜೂರಾದ ಅಂಥ ಸಿಬ್ಬಂದಿಗೆ ಮಾಡಿದ ಒಟ್ಟು ವೆಚ್ಚವು, ಆ ವರ್ಷದ ಆಯವ್ಯಯ ಅಂದಾಜುಗಳಲ್ಲಿ ಹಂಚಿಕೆ ಮಾಡಿದ ಹಣಕ್ಕಿಂತ ಹೆಚ್ಚಾಗತಕ್ಕದ್ದಲ್ಲ.

## ಅನುಬಂಧ–III

**(ವಿನಿಯಮ 16(1)ನ್ನು ನೋಡಿ)**

1. ಬಿಟ್ಟು ಬಿಡಲಾಗಿದೆ.

*2. (1) ಆಯೋಗದ ಸಿಬ್ಬಂದಿ ಸದಸ್ಯನಾಗಿರುವ ಮತ್ತು ಕೆಳಕಂಡ ತಃಖ್ತೆಯ ಅಂಕಣ 1ರಲ್ಲಿ ನಿರ್ದಿಷ್ಟಪಡಿಸಿದ ಹುದ್ದೆಗಳ ಯಾವುದೇ ಸಮೂಹಕ್ಕೆ ಸೇರಿರುವ ಪ್ರತಿಯೊಬ್ಬ ವ್ಯಕ್ತಿಯು,–

(ಎ) ತಃಖ್ತೆಯ 4ನೇ ಸಂವಾದಿ ಅಂಕಣದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳನ್ನು ವಿಧಿಸಿ, ಅಥವಾ

(ಬಿ) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 8ನೇ ನಿಯಮದಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳಲ್ಲಿ ಯಾವುದೇ ದಂಡನೆಯನ್ನು ವಿಧಿಸಿ ಅದನ್ನು ಶಿಸ್ತು ಪ್ರಾಧಿಕಾರವು ವಿಧಿಸಿರಲಿ ಅಥವಾ ಅಪೀಲು ಅಥವಾ ಪುನರವಲೋಕನಾ ಪ್ರಾಧಿಕಾರವು ವಿಧಿಸಿರಲಿ,

---

* ನೋಡಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 22 ಎಸ್‌ಎಸ್‌ಸಿ 95 ದಿನಾಂಕ 13–2–1996.

(ಸಿ) ಒಂದು ನಿರ್ದಿಷ್ಟ ಅವಧಿಗೆ ಅಥವಾ ಒಂದು ಅನಿರ್ದಿಷ್ಟ ಅವಧಿಗೆ ಆತನ ಕರಾರಿನ ನಿಬಂಧನೆಗಳಿಗೆ ಅನುಸಾರವಾಗಿ ಆ ಹುದ್ದೆಯನ್ನು ರದ್ದುಗೊಳಿಸಿದ ಹೊರತು ಆತನನ್ನು ಸೇವೆಯಿಂದ ಬಿಡುಗಡೆ ಮಾಡಿ:

ಪರಂತು, ಆತನ ಸೇವೆಯನ್ನು ಅಂತ್ಯಗೊಳಿಸಿದ ಕಾಲದಲ್ಲಿ ಐದು ವರ್ಷಗಳನ್ನು ಮೀರಿದ ಅವಧಿಗೆ ಎರಡರಲ್ಲೊಂದು ರೀತಿಯ ಕರಾರಿನ ಅಡಿಯಲ್ಲಿ ನಿರಂತರ ಸೇವೆ ಸಲ್ಲಿಸಿರಬೇಕು; ಅಥವಾ

(ಡಿ) ನಿವೃತ್ತಿ ವೇತನಕ್ಕೆ ಅನ್ವಯವಾಗುವ ನಿಯಮಗಳ ಮೇರೆಗೆ ಅವನಿಗೆ ಅನುಮತಿಸಲಾಗುವ ನಿವೃತ್ತಿವೇತನವನ್ನು ಕಡಿಮೆ ಮಾಡಿ ಅಥವಾ ತಡೆಹಿಡಿದು; ಅಥವಾ

(ಇ) ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ 10ನೇ ನಿಯಮದ ಮೇರೆಗೆ ಆತನನ್ನು ಅಮಾನತ್ತಿನಲ್ಲಿಟ್ಟು

– ಸದರಿ ತಃಖ್ತೆಯ 3ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರಿಗಳು ಹೊರಡಿಸಿದ ಆದೇಶಗಳ ವಿರುದ್ಧ ಅದರ ಸಂವಾದಿ ಅಂಕಣ 5ರಲ್ಲಿ ನಿರ್ದಿಷ್ಟಪಡಿಸಿರುವ ಪ್ರಾಧಿಕಾರಿಗೆ ಅಪೀಲು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು.

2. ಸಮೂಹ 'ಎ' ಮತ್ತು ಸಮೂಹ 'ಬಿ' ಗೆ ಸೇರಿರುವ ಆಯೋಗದ ಸಿಬ್ಬಂದಿ ಸದಸ್ಯನು, ನೇಮಕ ಪ್ರಾಧಿಕಾರಕ್ಕೆ ಅಧೀನನಾಗಿರುವ ಪ್ರಾಧಿಕಾರಿಯು ಮಾಡಿದ ಆದೇಶದ ವಿರುದ್ಧ ನೇಮಕ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

**ವಿವರಣೆ:–** 'ಆಯೋಗದ ಸಿಬ್ಬಂದಿ ಸದಸ್ಯ' ಎಂಬ ಪದಾವಳಿಯು ಆಯೋಗದ ಸಿಬ್ಬಂದಿ ಸದಸ್ಯನಾಗಿರುವುದು ನಿಂತುಹೋಗಿರುವ ಸದಸ್ಯನನ್ನೂ ಒಳಗೊಳ್ಳುತ್ತದೆ.

3. ಕಾರ್ಯದರ್ಶಿ – ಹಾಗೂ – ಇಲಾಖಾ ಪರೀಕ್ಷೆಗಳ ನಿಯಂತ್ರಕರು, ಕರ್ನಾಟಕ ಸೇವಾ ವಿನಿಯಮಗಳಲ್ಲಿ ತಿಳಿಸಿರುವ ಗೌರವಧನದ ಮಂಜೂರಾತಿಗೆ ಅನ್ವಯವಾಗುವ ಷರತ್ತುಗಳಿಗೆ ಒಳಪಟ್ಟು ಆಯೋಗದ ಯಾರೇ ಸಿಬ್ಬಂದಿ ಸದಸ್ಯನಿಗೆ ಗೌರವಧನವನ್ನು ಮಂಜೂರು ಮಾಡುವುದಕ್ಕೆ ಅಥವಾ ಆಯೋಗದ ಯಾರೇ ಸಿಬ್ಬಂದಿ ಸದಸ್ಯನು ಗೌರವಧನವನ್ನು ಸ್ವೀಕರಿಸುವುದಕ್ಕೆ ಮಂಜೂರಾತಿ ನೀಡುವ ಅಧಿಕಾರವನ್ನು ಹೊಂದಿರತಕ್ಕದ್ದು.

4. ಆಯೋಗದ ಕಚೇರಿಯಲ್ಲಿ ಅಕೌಟೆಂಟ್‌ನಾಗಿ ಅಥವಾ ಸಹಾಯಕನಾಗಿ ಸ್ಥಾನಾಪನ್ನನಾಗಲು ಬಡ್ತಿ ನೀಡಲಾದ ಕಿರಿಯ ಸಹಾಯಕನಿಗೆ ಸ್ಥಾನಾಪನ್ನ ವೇತನವನ್ನು ನೀಡತಕ್ಕದ್ದು.

**ತಃಖ್ತೆ**

| ಹುದ್ದೆಯ ಸಮೂಹ | ನೇಮಕ ಮಾಡಿಕೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರಿ | ಪ್ರಾಧಿಕಾರಿ | ದಂಡನೆಗಳನ್ನು ವಿಧಿಸಲು ಅಧಿಕಾರವುಳ್ಳ ಪ್ರಾಧಿಕಾರಿ ಮತ್ತು ಅವರು ವಿಧಿಸಬಹುದಾದಂಥ ದಂಡನೆಗಳು | |
|---|---|---|---|---|
| | | | ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957ರ ನಿಯಮ 8ರಲ್ಲಿ ನಿರ್ದಿಷ್ಟಪಡಿಸಿದ ದಂಡನೆಗಳು. (ಅಪೀಲು ಪ್ರಾಧಿಕಾರಿ) | |
| ಎಲ್ಲಾ ಸಮೂಹ–ಸಿ ಹುದ್ದೆಗಳು | ಕಾರ್ಯದರ್ಶಿ | ಉಪ ಕಾರ್ಯದರ್ಶಿ | (ii) ರಿಂದ (ivಎ) ವರೆಗೆ | ಕಾರ್ಯದರ್ಶಿ |
| | ಕಾರ್ಯದರ್ಶಿ | ಕಾರ್ಯದರ್ಶಿ | (v) ರಿಂದ (viii)ರ ವರೆಗೆ | ಅಧ್ಯಕ್ಷರು |
| ಎಲ್ಲಾ ಸಮೂಹ–ಡಿ ಹುದ್ದೆಗಳು | ಸಹಾಯಕ ಕಾರ್ಯದರ್ಶಿ | ಶಾಖಾಧಿಕಾರಿ | (i) | ಸಹಾಯಕ ಕಾರ್ಯದರ್ಶಿ |
| | | ಸಹಾಯಕ ಕಾರ್ಯದರ್ಶಿ | (ii) ರಿಂದ (iv-ಎ) | ಉಪ ಕಾರ್ಯದರ್ಶಿ |
| | | ಕಾರ್ಯದರ್ಶಿ | (v) ರಿಂದ (viii) | ಅಧ್ಯಕ್ಷರು |

**4. ಸೇವೆಗಳ ವರ್ಗೀಕರಣದ ಬದಲಿಗೆ ಸೇರ್ಪಡೆ:–**

ಸದರಿ ವಿನಿಯಮದಲ್ಲಿ, ಒಂದು ಹುದ್ದೆಗೆ ಸಂಬಂಧಿಸಿದಂತೆ 'ದರ್ಜೆ' ಎಂಬ ಪದವು ಬರುವ ಕಡೆಗಳಲ್ಲೆಲ್ಲಾ ಅವುಗಳಿಗೆ ಬದಲಾಗಿ 'ಸಮೂಹ' ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು 'ದರ್ಜೆ–I', 'ದರ್ಜೆ–II', 'ದರ್ಜೆ– III' ಮತ್ತು 'ದರ್ಜೆ–IV' ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ ಅವುಗಳಿಗೆ ಬದಲಾಗಿ 'ಸಮೂಹ–ಎ', 'ಸಮೂಹ–ಬಿ', ಸಮೂಹ–ಸಿ' ಮತ್ತು 'ಸಮೂಹ–ಡಿ' ಎಂಬ ಪದಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು ಮತ್ತು ಈ ದರ್ಜೆಗಳಿಗೆ ಮಾಡಿದ ಉಲ್ಲೇಖವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

## ಅನುಬಂಧ–IV

(ವಿನಿಯಮ 16ಸಿಯನ್ನು ನೋಡಿ)

–ಬಿಟ್ಟುಬಿಡಲಾಗಿದೆ–

## ಅನುಬಂಧ– V

(ವಿನಿಯಮ 16ಇಯನ್ನು ನೋಡಿ)

–ಬಿಟ್ಟುಬಿಡಲಾಗಿದೆ–

## ಅನುಬಂಧ– VI

**(ವಿನಿಯಮ 16ಎ ನೋಡಿ)**

ಕೆಳಕಂಡ ತಃಖ್ತೆಯ ಅಂಕಣ (1)ರಲ್ಲಿ ನಿರ್ದಿಷ್ಟಪಡಿಸಿರುವ ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯದರ್ಶಿಯವರ ಕಾರ್ಯಾಲಯದ ಹುದ್ದೆಗಳ ಸಂಬಂಧದಲ್ಲಿ, ಗೊತ್ತುಪಡಿಸಿರುವ ಸೇವಾ–ಪರೀಕ್ಷೆಗಳು, ಅದರ ಸಂವಾದಿ ಅಂಕಣ (2)ರಲ್ಲಿ ನಿರ್ದಿಷ್ಟಪಡಿಸಿರುವವುಗಳಾಗಿರತಕ್ಕದ್ದು.

**ತಃಖ್ತೆ**

| **ಹುದ್ದೆ** | | **ಸೇವಾ ಪರೀಕ್ಷೆಗಳು** |
|---|---|---|
| ಸಹಾಯಕ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು | 1. | ಅಕೌಂಟ್ಸ್ ಹೈಯರ್ |
| | 2. | ಜನರಲ್ ಲಾ ಭಾಗ I ಮತ್ತು II |
| | 3. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆಗಳು |
| | 4. | ನೇಮಕಾತಿ ನಿಯಮಗಳ ಬಗ್ಗೆ ಪರೀಕ್ಷೆ |
| ಹಿರಿಯ ಸಹಾಯಕರು/ ಸಹಾಯಕರು/ ಅಕೌಂಟೆಂಟರುಗಳು ಮತ್ತು ಸ್ವಾಗತಕಾರರು | 1. | ಅಕೌಂಟ್ಸ್ ಹೈಯರ್ |
| | 2. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆ |
| | 3. | ನೇಮಕಾತಿ ನಿಯಮಗಳ ಕುರಿತ ಪರೀಕ್ಷೆ |
| ಶೀಘ್ರಲಿಪಿಗಾರರು | 1. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆ |
| ಕಿರಿಯ ಸಹಾಯಕರು | 1. | ಅಕೌಂಟ್ಸ್ ಲೋಯರ್ |
| | 2. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆ |
| ಸಿಸ್ಟಂ ಅನಲಿಸ್ಟ್, ಸೀನಿಯರ್ ಪ್ರೋಗ್ರಾಮರ್, ಜೂನಿಯರ್ ಪ್ರೋಗ್ರಾಮರ್ | 1. | ಅಕೌಂಟ್ಸ್ ಲೋಯರ್ |
| | 2. | ಜನರಲ್ ಲಾ ಭಾಗ I ಮತ್ತು II |
| | 3. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು |

| ಹುದ್ದೆ | | ಸೇವಾ ಪರೀಕ್ಷೆಗಳು |
|---|---|---|
| | | ಪರೀಕ್ಷೆ |
| | 4. | ನೇಮಕಾತಿ ನಿಯಮಗಳ ಕುರಿತು ಪರೀಕ್ಷೆ |
| ಕನ್ಸೋಲ್ ಆಪರೇಟರ್ | 1. | ಅಕೌಂಟ್ಸ್ ಹೈಯರ್ |
| | 2. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆ |
| | 3. | ನೇಮಕಾತಿ ನಿಯಮಗಳ ಕುರಿತು ಪರೀಕ್ಷೆ |
| ಡೇಟಾ ಎಂಟ್ರಿ ಆಪರೇಟರ್ | 1. | ಅಕೌಂಟ್ಸ್ ಲೋಯರ್ |
| | 2. | ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತು ಪರೀಕ್ಷೆ |

**ಸೂಚನೆ:** ಸಚಿವಾಲಯ ಕೈಪಿಡಿ ಭಾಗ–1 ಪರೀಕ್ಷೆಯಲ್ಲಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ವ್ಯಕ್ತಿಗಳಿಗೆ ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ ಕುರಿತ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದರಿಂದ ವಿನಾಯಿತಿ ನೀಡಲಾಗಿದೆ.

* * * * *